ಪ್ರಕಾಶಕರು:

ಭಾರದ್ವಾಜ ಪ್ರಕಾಶನ

ಕದಿರೆ, ಮಂಗಳೂರು- ೨.

ಜುರಾಪಾಶಿಟಗಾ೧

ಭಾರದ್ವಾಜ ಪ್ರಕಾಶನದ ಪ್ರಕಟಣೆ - ೩.

ವರ್ತಮಾನದ ಹತ್ತು ಮುಖಗಳು

'ನವನಿಕೇತನ'

ಸಂಪಾದಿಕೆ:
ಶಾರದಾ ವಿ. ಭಟ್ಟ.

ಪ್ರ ಕಾ ಶ ಕ ರು :

ಭಾರದ್ವಾಜ ಪ್ರಕಾಶನ

ಕದಿರೆ, ಮಂಗಳೂರು - ೨.

VARTHAMANADA HATHU MUKAGAL

(Autobiographies of ten Artists, Social Work and literary personals in Kannada)

by

'Navanikethan' (V. B. Hosamane)

Published by

Bharadwaja Prakashana,
Kadri, Mangalore_575002

P. P. 39. *Price: Re. One o*

ಪ್ರಕಾಶಕರು:
ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು - ೨.

ಕ್ರಯ:
ಒಂದು ರೂಪಾಯಿ.

ಮುದ್ರಕರು:
ಯುಗಪುರುಷ ಮುದ್ರಣಾಲಯ, ಕಿನ್ನಿಗೋಳಿ.

ಪ್ರಸ್ತಾವನೆ-ಅರಿಕೆ-ಅರ್ಪಣೆ

ನಾಡು ಸುಂದರವಾಗಬೇಕು-ಎಂಬುದು ರಾಷ್ಟ್ರೀಯ ಭಾವನೆ. ಈ ಭಾವನೆಗೆ ತಕ್ಕಂತೆ ನಮ್ಮ ನಡೆ-ನುಡಿಗಳು ಬೆಳೆಯಬೇಕು. ಬೆಳೆದು ಎತ್ತರಕ್ಕೇರಬೇಕು. ಎತ್ತರದಿಂದ ಸಮೃದ್ಧಿಯ ಮಳೆಗರೆಯಬೇಕು. ಆಗ ನೆಲ ಹೊಲಕೆ ಹಸಿರು-ಜನಮನಕೆ ಉಸಿರು. ಇದು ಲೇಖನಿಯ ಉದ್ದೇಶ; ಲೇಖಕರ ಆಕ್ರೋಶ. ಕಲೆ, ಸಾಹಿತ್ಯಗಳು ಮನಸ್ಸಿನ ಕೊಳೆಯನ್ನು ತೊಳೆಯುವಂಥವು. ಕೊಳೆ ತೊಳೆದ ಮೇಲೆ ಉಳಿಯುವುದು ಸ್ವಚ್ಛತೆ. ಸಾಧಕನ ಸಾಧನೆ ಅದಾಗಿರಬೇಕು. ಈ ನಿಟ್ಟಿನಲ್ಲಿ 'ವರ್ತಮಾನ'ದ ಈ 'ಹತ್ತು ಮುಖ'ಗಳು ಸಾಧನೆಯ ಮಾರ್ಗ ಎಂದು ತಿಳಿದುಕೊಂಡಿದ್ದೇನೆ. ಈ ಮುಖಗಳು ಕಲೆಯ ಸಾಧನಾ ಮುಖಗಳು ಎಂದು ಭಾವಿಸಿದ್ದೇನೆ. ಬೇರೆ ಬೇರೆ ಕಾಲಗಳಲ್ಲಿ ಇಂತಹ ನೂರಾರು ಕಲಾ ಮುಖಗಳು ಕಾಣಬಲ್ಲವು. ಕಾಣುವ ಈ ಮುಖಗಳು ವರ್ತಮಾನ ಕಾಲದ ಕನ್ನಡ ನಾಡಿನ ಕೀರ್ತಿಯ ಶಿಖರವನ್ನೇರಿದ ಮುಖಗಳೆಂದು ಭಾವಿಸಿದ್ದೇನೆ.

ಈ ಮುಖಗಳಿಗಿಂತ ಎತ್ತರಕ್ಕೇರಿದ ಮುಖಗಳೂ ಕನ್ನಡ ನಲ್ಲಿ ಇಲ್ಲದಿಲ್ಲ. ಅಂಥವನ್ನೂ ಮುಂದಿನ ಸಂಕಲನಗಳಲ್ಲಿ ಪಡಿಸಿಕೊಳ್ಳಲಾಗುವುದು.

ಮುಖ್ಯವಾಗಿ, ಈ ಮುಖಗಳ ಶಿಲ್ಪಿ ನನ್ನ ಭಾ ಯರು ನನ್ನ ಪತಿದೇವರು. ಬಿಡುವಿಲ್ಲದ ಸಾಹಿತ್ಯ ಸೇವ ಪತ್ರಿಕಾ ಕರ್ತರು, ಮೊಡಂಕಾಪಿನ ಕಾರ್ಮೆಲ್ ಕಾನ್ವೆ ಹೈಸ್ಕೂಲಿನ ಭಾಷಾಧ್ಯಾಪಕರು, ನನ್ನ ಪಾಲಿಗೂ ಗುರುಗ ಈ ಮುಖಗಳನ್ನು ಸಂಗ್ರಹಿಸಿ ಒಂದು ಕಿರುಹೊತ್ತಗೆಯ ದರೂ ಮಾಡಬಾರದೆ, ಎಂದು ಕಾಡಿದರೂ ಮನಸ್ಸು ಮ ಲಿಲ್ಲ. ಇವರ ಸ್ನೇಹಿತರಲ್ಲಿ ಕೆಲವರು ನನ್ನನ್ನು ಈ ಕಾಯ ಪ್ರೇರಣೆ ಇತ್ತು ಸಂಗ್ರಹಿಸಿಕೊಡಿ ಎಂದರು. ನನ್ನ ಭಾ ಗರಿ ಮೂಡಿತು. 'ನ[illegible]ನಿಕೇತನ'ರ ಸಾಹಿತ್ಯ ಸಂಗ್ರಹಿಸಬೆ ಸಂಪಾದಿಸಿ ಪ್ರಕಟಿಸಬೇಕು ಎಂದುಕೊಂಡು ಕಾರ್ಯಕ್ಕೆ ತೊ ದೆನು. ಎಲ್ಲ ಸಿದ್ಧತೆಗಳಾದ ಮೇಲೆ 'ಭಾರದ್ವಾಜ ಪ್ರಕಾ ದವರೇ ಪ್ರಕಟಿಸಲು ಮುಂದಾದರು. ಪ್ರಕಾಶನದ ಉ ಹಾಗೂ ಈ ವ್ಯಕ್ತಿ ಚಿತ್ರಣದ ಉದ್ದೇಶ ಏಕಮುಖವಾಗಿದೆ ಬುದನ್ನೂ ವಾಚಕರಿಲ್ಲಿ ಗಮನಿಸಬಹುದು. ಈ ಉ ಸಾರ್ಥಕವಾಗುವುದೆಂಬ ಭರವಸೆಯೊಂದಿಗೆ ಇದನ್ನು ವಾ ಕೈಗೊಪ್ಪಿಸುತ್ತಿದ್ದೇನೆ. ಇದನ್ನು ಪ್ರಕಟಿಸಲು ಒಪ್ಪಿದ ಪ್ರ ನದ ಸಂಪಾದಕರಿಗೂ ಈಗಾಗಲೇ 'ವಾರದ ವ್ಯಕ್ತಿ' ವಿಭಾ ಪ್ರಕಟಿಸಿದ, ಕಾರ್ಕಳದ ಕೃಷಿಕರ ಸಂಘಟನೆ ವಾರಪತ್ರಿ ಸಂಪಾದಕರಾದ ಶ್ರೀ ಬೋಳ ರಘುರಾಮ ಶೆಟ್ಟಿ ಅವ ನನ್ನ ಈ ಯತ್ನಕ್ಕೆ ಚೇತನ ತುಂಬಿ ಹರಸಿದ ಹಾಗೂ ವ

ಡಿಯ ತಿಲಕವಿಟ್ಟು ಪ್ರೋತ್ಸಾಹಿಸಿದ ಗುರುಗಳಾದ ಪ್ರೊ। ಎಸ್. ವಿ. ಪರಮೇಶ್ವರ ಭಟ್ಟರಿಗೂ ಕೃತಜ್ಞಳಾಗಿದ್ದೇನೆ. ನನ್ನಲ್ಲಿ ಸಾಹಿತ್ಯಿಕ ಭಾವನೆಯನ್ನು ಒಡಮೂಡಿಸಿದ ಪರಿಸರದ ಸಾನ್ನಿಧ್ಯಕ್ಕೆ ನಾನು ಋಣಿ.

ಈ ಕೃತಿ ನನ್ನ ಚೊಚ್ಚಲ ಸಂಪಾದನೆ. ಇದೊಂದು ಗ್ರಂಥರೂಪದಲ್ಲಿರಲೆಂದು ಪ್ರಯತ್ನಿಸಿ ಈ ಕಾರ್ಯದಲ್ಲಿ ತೊಡಗಿದ್ದೇನೆ. ಈ ಕೃತಿಯನ್ನು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಣೆ ಮಾಡುವುದರ ಜೊತೆಗೆ, ಈ ವರ್ಷ ಮಹಿಳೆಯರ ವರ್ಷ ಎಂದು ಇದನ್ನು ಮಹಿಳೆಯರ ಮಡಿಲಿಗೇ ಅರ್ಪಿಸುತ್ತೇನೆ.

ಇಂತು,

ಕದಿರೆ ಮಂಗಳೂರು-2. ಶಾರದಾ ವಿ. ಭಟ್ಟ,

ಮುನ್ನುಡಿ

ಆ–ಆ ರಂಗದಲ್ಲಿ ಅರಿತು ನುರಿತ ಅನುಭವೀ ಹಿರಿ
ನಡೆದುದೇ ಹೆದ್ದಾರಿಯಾಗಿರುತ್ತ ಅಂಥ ಹಿರಿಯರ ಹಿರಿ
ಬಗೆಗೆ ಅರಿತಷ್ಟೂ ಓದುಗರಲ್ಲಿ ಗರಿಮೆ ಮೈಗೂಡುವುದು
ನಾಡಿನ ಅನುಸರಣೀಯರೆನಿಸಿದವರ ತಿಳಿಬಾಳ ಗೊತ
ಗಳನ್ನು ತಿಳಿದಂತೆಲ್ಲ ನಮ್ಮ ಬದುಕು ಬೆಳಗುವುದು ನಿಜ. ಹ
ಮಹಾತ್ಮರೆನಿಸಿದವರ ಪ್ರಭಾವಶಾಲೀ ಜೀವನದ ಕೂಲಂಕ
ಜ್ಞಾನ ಅವಶ್ಯ. ಅಷ್ಟನ್ನು ಗಳಿಸಲು ಅಸಾಧ್ಯವೆಂದಾದಾಗ
ನೆಗೆ ಪ್ರಮುಖವೆನಿಸಿರುವ ಗಮನಾರ್ಹವಾದ ಅಲ್ಪ ಸ್ವ
ವಾದರೂ ತಿಳಿಯಲೇ ಬೇಕಾದುದು ಅತ್ಯವಶ್ಯ. ಎಲ್ಲ
ರಾರೂ ಇಲ್ಲ. ಹೌದು, ಆದರೆ ಗುರುತಿಸಿ ಗೌರವಿಸಬ
ವರ ಕುರಿತು ಒಂದಿಷ್ಟೂ ತಿಳಿದಿಲ್ಲವೆಂದಾದಾಗ ಏನೇನೂ
ತಿಲ್ಲವೆಂದೇ ಸಾರಾಂಶ.

ಪ್ರಕೃತದ 'ನವನಿಕೇತನ'ದ ಈ 'ವರ್ತಮಾನದ
ಮುಖ'ಗಳಲ್ಲಿ ಅಂತಹ ನಾಡಿನ ವಿಶಿಷ್ಟ ವ್ಯಕ್ತಿಗಳ
ಸಾಕಷ್ಟು ಪರಿಣಾಮಕಾರಿಯಾದ ವಿವರಣೆ ಲಭಿಸುತ್ತದೆ.
ದಿಸಿದ ಪ್ರಮಾಣ ಚಿಕ್ಕದಾಗಿರುವಂತೆಯೇ ಚೊಕ್ಕವಾಗಿರ
ಎತ್ತಿ ಒತ್ತಿ ಹೇಳಬೇಕಾಗಿರುವ ವಿಚಾರ. ಇಲ್ಲಿ ಕಾಣ
ಜಾಜ್ವಲ್ಯಮಾನ ಮುಖಗಳು ನಾಡನ್ನು ಬೆಳೆಯುವಲ್ಲಿ–ಬೆ
ವಲ್ಲಿ ಅನುಕರಣೀಯವಾಗಿರುವಂತೆ ಓಜಸ್ಸು ತೇಜಸ್ಸಿ
ಸ್ಫೂರ್ತಿಪ್ರದವೂ ಎಂಬುದು ಅಕ್ಷರಶಃ ಸತ್ಯ.

ಪರಿಚಯಿಸಿದ ರೀತಿಯಲ್ಲೂ ಸಾಹಿತ್ಯದ ಸೌಂದರ್ಯ ಹಾಗೂ ಚಿರನಾವಿನ್ಯ ಹೊರಹೊಮ್ಮಿರುವುದು ಪ್ರಶಂಸನೀಯ. ಸತತೋತ್ಸಾಹೀ 'ನವನಿಕೇತನ'ರಿಂದ ಸದ್ದುಗದ್ದಲವಿಲ್ಲದೆ ಸೇವೆಯ ದೀಕ್ಷೆ ತೊಟ್ಟ ನಾಡಿನ ಇನ್ನುಳಿದ ಪ್ರಮುಖರ ಮುಖ ಪರಿಚಯ ಸಾಕಷ್ಟು ಪ್ರಮಾಣದಲ್ಲಿ ಸಾಗಲಿ. ಎಂದು ಹಾರ್ದಿಕವಾಗಿ ಹಾರೈಕೆ.

ಕೊಡತ್ತೂರು ಅನಂತಪದ್ಮನಾಭ ಉಡುಪ,
ಸಂಪಾದಕ.

ರಂಗಪುರುಷ ಕಾರ್ಯಾಲಯ,
ಕಿನ್ನಿಗೋಳಿ, ದ. ಕ.

ಅನುಕ್ರಮ

ಶ್ರೀ ವಿಶ್ವೇಶತೀರ್ಥರ ಶ್ರೀಪಾದ

ಹಲವರು ಪ್ರಸಿದ್ಧಿಗಾಗಿಯೇ ಬದುಕುವವರಾದರೆ ಇನ್ನು ಹಲವರು ಬದುಕಿಗಾಗಿಯೇ ಪ್ರಸಿದ್ಧಿ ಸಂಪಾದಿಸುವವರು. ಈ ರೀತಿಯ ದ್ವಂದ್ವ ಭಾವದ ವ್ಯಕ್ತಿಗಳ ಮಧ್ಯದಲ್ಲಿ ಇಂದು ಖಂಡಿತ ವಾದಿಗಳು ಬದುಕುವುದೇ ಕಷ್ಟ. ಉತ್ತಮ ಬದುಕನ್ನು ಗಳಿಸ ಬೇಕಾದರಂತೂ ದುಸ್ಸಾಧ್ಯ. ಈ ಎಲ್ಲ ಬಗೆಯವರನ್ನು ಥಣಿಕಿ ನಿಂತ ಒಬ್ಬ ವ್ಯಕ್ತಿಯೆಂದರೆ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು.

ಇನ್ನೂ ತಾರುಣ್ಯದ ಮೇಲ್ಮೆಟ್ಟಲನ್ನು ದಾಟುತ್ತಿರುವ ಶ್ರೀಪಾದರು ಕೃತಿವಚನಗಳೆರಡರಲ್ಲೂ ತರುಣರಾಗಿಯೇ ತೋರುತ್ತಾರೆ. ನಲ್ವತ್ತ ನಾಲ್ಕರ ಶ್ರೀಗಳವರು ಖಂಡಿತವಾದಿ ಗಳು. ರಾಮಕುಂಜ ಹುಟ್ಟೂರು. ತಂದೆ–ತಾಯಿಗಳಿಂದ ಮಾಧ್ವ ಗುರುಪೀಠಕ್ಕೆ ಬಾಲ್ಯದಲ್ಲೇ ದತ್ತವಾಗಿ ಬಂದರು. ಶ್ರೀ ಭಂಡಾರಕೇರಿ ಮಠಾಧೀಶರಾಗಿದ್ದ, ಮತ್ತೆ ಫಲಿಮಾರು ಮಠದ ಪಟ್ಟಕ್ಕೆ ದತ್ತವಾದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರು ಪಾಠ ಪ್ರವಚನಾದಿಗಳಿಂದ ಇವರಲ್ಲಿ ಜ್ಞಾನ ನಿಧಿಯನ್ನು ತುಂಬಿ ದರು. ಗುರು ಋಣಮುಕ್ತರಾಗಲು ಮಾಧ್ವತತ್ವ ಜ್ಞಾನವನ್ನು ಎಲ್ಲೆಡೆ ಪಸರಿಸುವ ಸಂಘಟಿತ ಧರ್ಮ–ತತ್ವ ಬೋಧನೆಯ ಪುಣ್ಯಕಾರ್ಯದಲ್ಲಿ ತೊಡಗಿದರು, ಧಾರ್ಮಿಕ ಜಾಗೃತಿಯ ನ್ನುಂಟುಮಾಡುವುದರ ಜೊತೆಗೆ ಮತೀಯ ಕಲಹಗಳ ಬಗೆಗೆ ತೀವ್ರತರ ತಡೆಗಳನ್ನು ತರತೊಡಗಿದರು. ಇದರ ಪರಿಣಾಮ

ಈ ಗಾಂಧಿವಾದಿ 'ಸ್ವಾಮಿ'ಗಳ ಮೇಲೆ ಅಧಿಕಾರಸ್ಥ ಹಾ
ಸಾರ್ವಜನಿಕರೆಲ್ಲ ಆಕರ್ಷಿತರಾದರು.

ಶ್ರೀ ಪೇಜಾವರ ಮಠಾಧೀಶರು ಅಜಾತ ಶತ್ರುವೇ ಸ
ತಮ್ಮ ನಿಲುಮೆಯನ್ನು ತೀವ್ರವಾಗಿ ಸ್ಪಷ್ಟಪಡಿಸಬೇಕಾದೀ
ಎಂಬಲ್ಲಿ ಅವರ ಮಾಶಿಲ್ಲ. ಮಾಧ್ವ ಮಠದ ಶುದ್ಧಾನುಸ
ಯನ್ನು ಮಾಡುತ್ತಿದ್ದಾರೆಯೇ ಹೊರತು ಅಂಧಾನುಕರ
ಅವರಲ್ಲಿ ಆಶ್ರಯವೇ ಇಲ್ಲ. ಇದರಿಂದಾಗಿ ಮಾಧ್ವರಿಗಿಂತ
ಮಾಧ್ವೇತರರೇ ಅಧಿಕ ಸಂಖ್ಯೆಯಲ್ಲಿ ಅವರ ಭಕ್ತರಾಗಿ ಬಿಟ್ಟ
ಇದು ಅವರ ಒಂದು ಮುಖ.

ಏಳನೇ ವಯಸ್ಸಿನಲ್ಲೇ ಬಾಲಬ್ರಹ್ಮಚರ್ಯಾಶ್ರಮವ
ಸ್ವೀಕರಿಸಿ ನೇರಾಗಿ ಸನ್ಯಾಸಾಶ್ರಮಕ್ಕೆ ಏರಿದರು. ಧರ್ಮ
ಕರ್ಮಗಳ ಅರಿವು ಆ ಮೇಲಾಯಿತು. ಮೂವತ್ತೈದು ವ
ಗಳ ಸನ್ಯಾಸಾಶ್ರಮದ ಜೀವನದಲ್ಲಿ ಶಾಸ್ತ್ರಾಭ್ಯಾಸಕ್ಕೆ ವಿನಿ
ಗಿಸಿದುದು ಅತಿಮಿತಿಯ ಕಾಲ. ಆದರೆ ಅಭ್ಯಸಿಸಿದ ಶ
ವನ್ನು ಪ್ರಯೋಗಿಸಲು–ದೀನದಲಿತರ ಏಳಿಗೆಗಾಗಿ ವಿನಿಯೋ
ಸಲು ಮಿತಿಮೀರಿದ ಕಾಲವನ್ನು ಪ್ರಯೋಗಿಸಿದ್ದಾರೆ. ಅ
ಮಾಧ್ವ ಮಹಾಮಂಡಲ ಸೀಮಿತ ಧರ್ಮ; ಅಷ್ಟರಲ್ಲೇ
ರಿಗೆ ತೃಪ್ತಿ ಇಲ್ಲ. ವಿಶ್ವಹಿಂದೂ ಪರಿಷತ್ತು ಸೀಮಾತೀತ.
ಸಮುದ್ರದಲ್ಲಿ ಈಸತೊಡಗಿದಾಗ ಶ್ರೀ ಸ್ವಾಮಿಗಳು ಮೊದ
ಕಂಡುದು–ಅಸ್ಪೃಶ್ಯತಾ ನಿವಾರಣೆಗಾಗಿ ಗಾಂಧೀಜಿ ಅವರ
ನಿರ್ಧಾರಗಳನ್ನೆಲ್ಲ ಕೈಗೊಳ್ಳಬೇಕಾಗಿತ್ತು. ಹರಿಜನರ ವ
ಹೋಗಿ ಅವರನ್ನೂ ಅನುಗ್ರಹಿಸಿ ಬಂದರು. ತುಳು ಕೂ
ಸನ್ಮಾನ ಸಭೆಯಲ್ಲಿ ಭೂತ ಕಟ್ಟಿ ಕುಣಿಯುವ ಪಂಬದನಿಗ ಶ
ಹೊದಿಸಿ ಹಾರ ತೊಡಿಸಿ ಬಿರುದು ಕೊಡಿಸಿ ಹಣ್ಣು

ತಾಂಬೂಲ ಹಿಡಿಸಿದಾಗ ಕೆಲವರ ಕಣ್ಣಲ್ಲಿ ಆದರೂ ನೀರೂರಿರಬೇಕು. ಕೆಲವರು ಪರಿಸ್ಥಿತಿಯನ್ನು ಬೈದು ಸಮಾಧಾನ ಪಟ್ಟುಕೊಂಡಿರಬೇಕು.

ಶ್ರೀಗಳವರ ಈ ವರೆಗಿನ ಎಲ್ಲ ಕಾರ್ಯ ವಿಧಾನಗಳಿಂದ ಮಿಗಿಲಾದುದು ಬರಗಾಲ ಪೀಡಿತರಿಗಾಗಿ ಪಾದಯಾತ್ರೆ ಮಾಡಿ ನಿಧಿ ಸಂಗ್ರಹಿಸಿದುದು. ಸಾರ್ವಜನಿಕ ಸೇವೆಯ ಹೆಸರಿನಲ್ಲಿ ಶ್ರೀಗಳ ತ್ಯಾಗ-ವರ್ತಕರ ಭೋಗ-ಅಷ್ಟಕ್ಕಿಂತ ಹೆಚ್ಚು ಹೇಳಬೇಕಾಗಿಲ್ಲ ಇಲ್ಲಿ.

ನವಂಬರ ೧೯೭೪.

ಅಭಿನವ ಚಾವುಂಡರಾಯ

"ಶ್ರೀಯುತನೊಳುದಾರತೆ ವಾಕ್ ಶ್ರೀಯುತನೊ
ಮತ್ಸರತೆ" ಈ ಗುಣ– ಈ ಸುಭಾಷೆ, ಸಹಜವಾಗಿ ಒಪ್ಪ
ವ್ಯಕ್ತಿ ನಮ್ಮ 'ಅಭಿನವ ಚಾವುಂಡರಾಯರು' ಕೆಲಮಂದಿ 'ವಾ
ಶ್ರೀ'ಯಿಂದ ಉನ್ನತಿಗೇರಿದವರಾದರೆ ಕೆಲ ಮಂದಿ 'ಅ
ಶ್ರೀ ಯಿಂದ ಗದ್ದುಗೆಯನ್ನು ಸಾಧಿಸಿಕೊಳ್ಳುತ್ತಾರೆ. ಆ
ಸಕಲಗುಣ ಪರಿಪೂರ್ಣರಾಗಿ ಹುಟ್ಟಿನಿಂದಲೇ ಅಸೀಮ ಎತ್ತ
ಕ್ಕೇರುವ ಮಂದಿ ವಿರಳ. ಇಪ್ಪತ್ತೊಂಭತ್ತು ಹರೆಯದಲ್ಲ
ಲೋಕೋತ್ತರ ಕೀರ್ತಿಭಾಜನರಾಗಿ, ಇತಿಹಾಸ ನಿರ್ಮಾ
ಮಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥ ದೇ
ಸನ್ನಿಧಿಯಲ್ಲಿ, ಅಣ್ಣಪ್ಪ ದೈವಗಳ ಇದಿರಿನಲ್ಲಿ ಮಂಗಳ ಮೂ
ಬಾಹುಬಲಿಯನ್ನು ನಿಲ್ಲಿಸಿ, ಇತಿಹಾಸದ ಅತಿ ದೊಡ್ಡ ಕಾಯ
ಸಾಹಸವನ್ನು ಪೂರೈಸಿ, ಭಕ್ತಿ ಭಾರವನ್ನು ಹೇರೈಸಿ, ಭಜಕ
ಕಣ್ಮಣಿಯಾಗಿ ತೋರಿದ್ದಾರೆ– ಈ ಪುಣ್ಯ ಯುಗ ನಿರ್ಮಾ
ಕರ್ತೃ ಶ್ರೀ ವೀರೇಂದ್ರ ಹೆಗ್ಗಡೆಯವರು! ಶ್ರವಣ ಬೆಳ್ಗೊಳ
ಬಾಹುಬಲಿಯನ್ನು ನಿಲ್ಲಿಸಿದ ಇತಿಹಾಸ ಪುರುಷ ಚಾವುಂಡರಾ
ನನ್ನೂ ಮೀರಿಸಿದ ಸಾಹಸ ನಮ್ಮ ಈ ಅಭಿನವ ಚಾವು
ರಾಯರದು! ಭೂಮಿಯಿದ್ದಷ್ಟು ಕಾಲ ಇತಿಹಾಸದಲ್ಲಿ ಶಾ
ಕೀರ್ತಿ ಸಲ್ಲುವುದು ಶ್ರೀ ಹೆಗ್ಗಡೆಯವರಿಗೆ.

"ನಾನೇನೂ ಮಹತ್ಕಾರ್ಯವನ್ನು ಮಾಡಿಲ್ಲ;
ವಾಕ್ಯ ಪರಿಪಾಲನೆ ನನ್ನ ಗುರಿಯಾಗಿತ್ತು; ಈ ಮಹದುದ್ದೆ

ರವೇರಲು ತಾಯಿಯ ಹಾರೈಕೆ, ಮಹಾಜನರ ಅಭಿಮಾನದ
ಕ್ಷೆ. ಧರ್ಮದೇವತೆಗಳ ಆಕಾಂಕ್ಷೆ, ನವಗೀ ಬಗೆಯ ಬಲು
ನ್ನು ಒಡಮೂಡಿಸಿತಲ್ಲದೆ ಬೇರೇನೂ ಅಲ್ಲ.

—ಇದು ಈ ನಮ್ಮ ಅಭಿನವ ಚಾವುಂಡರಾಯರ ಸೌಜನ್ಯ
ರ್ಣ ವಾಣಿ! ಕಾರ್ಕಳದ ಮಂಗಲ ಪಾದೆಯೊಳಗೆ ಶತಮಾನ
ಂದಿಂದ ಸೊರಗಿ–ನೊಂದು–ಬೆಂದು ಬಿದ್ದಿದ್ದ ಕಲ್ಲು ಅರ
ತು; ಎದ್ದು ಬಂದಿತು; ಎಂಬತ್ತು ಕಿಲೋಮೀಟರಿನಷ್ಟು
ದೂರದ ಧರ್ಮಸ್ಥಳವನ್ನು ಸೇರಿತು. 'ಈ ಪುಟ್ಟ ತಮ್ಮನನ್ನು
ಹೋಗಗೊಡೆ'ನೆನ್ನುವ ಅಣ್ಣನ ಮೊಂಡುತನವೂ ಅಣ್ಣನನ್ನು
ಟ್ಟು ದೂರ ಹೋಗಲಾರೆನೆಂದೆನ್ನುವ ತಮ್ಮನ ಚಂಡಿತನವೊ
ರ್ಕಳದಲ್ಲಿ ಈ ಮಂಗಳ ಮೂರ್ತಿಯ ಮುಂದೆ ತೋರಿ ಬರ
ಲ್ಲ. ತಾನು 'ಗೆದ್ದು ಸೋತ" ಆದರ್ಶವನ್ನು ಈ ಬಾಹು
ಲಿ ಮೂರ್ತಿ, ಇಂದಿನ "ಸೋತು ಗೆದ್ದ" ರಾಜಕಾರಣಿಗಳ
ಣ್ಣನ್ನು ತೆರೆಯಿಸಬೇಕೆಂದೇ ಇರಬಹುದೇನೊ-ನಮ್ಮ ಅಭಿನವ
ಾವುಂಡರಾಯರ ಈ ಸಾಹಸ ಎಂದು ಕವಿವಾಣಿಯಲ್ಲಿ ಉಲ್ಲೇ
ಖಿಸಿದರೆ ಯಾರೂ ಬೆರಗಾಗಬೇಕಿಲ್ಲ. ಯಂತ್ರಶಕ್ತಿಗೂ ಮಣಿ
ಯದ ಇನ್ನೊಂದು ಶಕ್ತಿಯಿದೆ ಎಂಬುದನ್ನು ಈ ಬಾಹುಬಲಿಯ
ಚೈತ್ರಯಾತ್ರೆಯಲ್ಲಿ ಎಲ್ಲರೂ ಅರ್ಥಮಾಡಿಕೊಳ್ಳುವಂತಾಗಿದೆ.
ರ್ವಧರ್ಮ ಸಮನ್ವಯ ದೃಷ್ಟಿಯೂ ಇಲ್ಲಿ ಕೂಡಿಬಂದಿದೆ.

ಈ ನಮ್ಮ ಅಭಿನವ ಚಾವುಂಡರಾಯರ ಅಬ್ಬೆ ರತ್ನಮ್ಮ
ನವರು. ಇತಿಹಾಸದ ಚಾವುಂಡರಾಯನಿಗೆ 'ಅಬ್ಬೆ ಕಾಳಲಾ
ದೇವಿ' ತೋರಿದಂತೆ ತೋರಿದ್ದಾರೆ. ಧರ್ಮದ ರಕ್ಷೆಯನ್ನು

ಹೊತ್ತ ಕ್ಷೇತ್ರದಲ್ಲಿ ಈ ತ್ಯಾಗಶೀಲ ಮೂರ್ತಿಗಳೆಲ್ಲ ಇತಿಹ
ರತ್ನಗಳೇ ಆಗಿ ತೋರುತ್ತಾರೆ. ಶ್ರೀ ಕ್ಷೇತ್ರದ ಧರ್ಮಾಧಿ
ಪೀಠ, ಪರುಷಮಣಿಯಂತೆ ಯಾರನ್ನೂ ಬೆಳಗುವುದೆಂಬು
ನಮ್ಮ ಮುಂದಿರುವಂತಹ ನಿದರ್ಶನಗಳೇ ಸಾಕು. ದಿ।
ವರ್ಮ ಹೆಗ್ಗಡೆಯವರ 'ವಚನ' ಪರಿಪಾಲಿಸಿದ, ಪಿತೃ
ಪರಿಪಾಲಕ ಶ್ರೀ ರಾಮನೇ 'ದಾನಧುರಂಧರ' 'ಸತ್ಕಾ
ರಂಗ ಸಿಂಗ' 'ಮಾನವ ಕುಲ ಚೂಡಾಮಣಿ' ಆಗಿ ತೋ
ತ್ತಾರೆ – ಸಪತ್ನೀಕರಾಗಿ ಈ ಅಭಿನವ ಚಾವುಂಡರಾಯ
ವೀರೇಂದ್ರ ಹೆಗ್ಗಡೆಯವರು!. ಮಂಗಲ ಪಾದೆಯಿಂ
ಹೊರಟ ಮಂಗಲಮೂರ್ತಿ ಬಾಹುಬಲಿಗೆ ಜಯ ಜಯ
ಕೂಗು ಮುಗಿಲೆತ್ತರಕ್ಕೇರಿ ಇನ್ನೂ ಪ್ರತಿಧ್ವನಿಸುತ್ತದೆ.

ದಶಂಬರ

ಮಾಧವನಗರದ ಸೃಷ್ಟಿಕರ್ತ

ಮಣಿಪಾಲದ ಬ್ರಹ್ಮ ಅರ್ಥಾತ್ ಸೃಷ್ಟಿಕರ್ತ ಡಾ। ಟಿ.
ಂ. ಎ. ಪೈ ಅವರಿಗೆ ಎಪ್ಪತ್ತೇಳನೇ ಹುಟ್ಟುಹಬ್ಬ! ಕಿನ್ನಿ
ಗೋಳಿಯ ಯುಗಪುರುಷ ಪ್ರಕಾಶನದ ಬ್ರಹ್ಮ ಅರ್ಥಾತ್ ಶ್ರೀ
ಡತ್ತೂರು ಅನಂತಪದ್ಮನಾಭ ಉಡುಪರಿಗೆ ತಮ್ಮ ಎಪ್ಪ
ಳನೆಯ ಸೃಷ್ಟಿಯ ಹಬ್ಬ!. 'ತಾಳ ಬೇಕು. ತಕ್ಕ ಮೇಳ
ಕು' ಎಂದು ದಾಸರು ಹಾಡಿದ್ದು ಇಲ್ಲಿ ಸಾರ್ಥಕಗೊಂಡಿದೆ.
ದು ಕರ್ಮಗಳಲ್ಲಿ ಕುಶಲ ಯೋಗ! ಈ ಯೋಗದ ಸಾಧನೆಗೆ
ಯುಗಪುರುಷ'ರು ನಿಮಿತ್ತ ಮಾತ್ರರಂತೆ! ಈ ಕುರು
ಕಾರ್ಯ) ಕ್ಷೇತ್ರದಲ್ಲಿ ಮಾಧವನ ವಿಶ್ವರೂಪ ಪ್ರದರ್ಶನ
ಮಾಡಿಸಿದ ಶ್ರೀ ಕೃಷ್ಣನ ಪ್ರತೀಕರಾದ ಶ್ರೀ ಶ್ರೀ ವಿಶ್ವೇಶ
ರ್ಥರು ಅಂದು ಸಾರ್ಥಕ ನುಡಿಯನ್ನೇ ಆಡಿದರು – ರೂಪಕ
ಸಮ್ರಾಟರಾಗಿ ಶ್ರೀ ಕೋ. ಚೆ. ಅವರ ನ್ಯಾಯವಾದಿತ್ವ.
ಪ್ರಾ। ಎಸ್. ವಿ. ಪಿ. ಹಾಗೂ ಪ್ರಾ। ಕು. ಶಿ. ಅವರ
ಪಾಂಡಿತ್ಯಪೂರ್ಣ ಅಭಿನಂದನೆಯನ್ನು ಸಾರ್ಥಕಗೊಳಿಸಿತ್ತು.
ಓಲಗ- ಪೂರ್ಣಕುಂಭಗಳ ಮೇಳನದಿಂದ, ವೇದಘೋಷ
ಳಿಂದ, ಶ್ರೀ ಅಸ್ರಣ್ಣರ ಆಶೀರ್ವಚನಗಳಿಂದ ಮಣಿಪಾಲ
ಬ್ರಹ್ಮರು ಪುನೀತರಾದರು!. ಅವರ ಎಪ್ಪತ್ತೇಳನೆಯ ಹುಟ್ಟು
ಹಬ್ಬದಿಂದ ಕಿನ್ನಿಗೋಳಿ ಬ್ರಹ್ಮರು (ಯುಗ) ಪುರುಷಾರ್ಥ
ಸಾಧಕರಾದರು! ಇದಕ್ಕೆ ಏನ್ನುವುದು 'ಕಾಕತಾಳೀಯ' ಎಂದು.

ಮಾಧವನಗರ ಎಂದು ಖ್ಯಾತಿ ಪಡೆದ ಮಣಿಪಾಲ, ಕಾಡಾ
ದ್ದುದು ಮಾಧವ ಕೃಪೆಯಿಂದ ನಾಡಾಯಿತು. ಬರಡಾ

ಗಿದ್ದುದು ಬಂಗಾರವಾಯಿತು. ವಿಜಯನಗರದ ಸಾಯ
ಮಾಧವರಂತೆ ಈ ಮಾಧವರು ಕನಕವೃಷ್ಟಿಯನ್ನೇ ಮಾ
ದರು– ಈ ಮಣಿಪಾಲಕ್ಕೆ! ಅವರ ಈ ಉದ್ಯೋಗಶೀ
ನಾಡಿನ ಹಿರಿದು ಸೇವೆಯಾಯಿತು. ಲಕ್ಷಾಂತರ ಮಂ
ವಿವಿಧೋದ್ದೇಶ ಸಹಾಯ ಸಹಕಾರಗಳ ವ್ಯವಸ್ಥೆ! ಎಲ್ಲ
ಮಾಧವನ ಸೃಷ್ಟಿ ಎನ್ನುವಂತಾಯಿತು – ಇವರ ಸೇ
ಕಾರ್ಯದ ಫಲ!

ಬಡ ಕುಟುಂಬದಲ್ಲಿ ಹುಟ್ಟಿ, ಬೆಳೆದು, ಬೆಂದು–ನೊ
ಡಾ। ಪೈಗಳು ಆದರ್ಶ ಸಂಘಟಕರು. ವಿದ್ಯಾರ್ಥಿಯಾಗಿ
ಗಲೂ ವಿವಿಧ ರೀತಿಯಿಂದ ನಿಧಿ ಎತ್ತಲು ತೊಡಗಿ
ಇಂದಿಗೂ ಆ ಸಂಪ್ರದಾಯವಿರಿಸಿಕೊಂಡಿದ್ದಾರೆನ್ನಬೇಕು.
ಉಳಿತಾಯ ಯೋಜನೆಯಂತೆ ಶಾಲಾ ವಿದ್ಯಾರ್ಥಿ ಸಂಘ
ತೊಡಗಿದ ಅವರ ನಿಧಿ ಸಂಗ್ರಹ – ಜನ ಸಂಘಟನಾ ಕಾ
ವಿಚಿತ್ರ ರೀತಿಯಿಂದ ಬೆಳೆದು ವಿವಿಧ ರೀತಿಯ ಆರ್ಥಿಕ
ಪಣೆಗೆಗೆ, ಉದ್ಯಮಗಳ ಬೆಳವಣಿಗೆಗೆ, ಶಿಕ್ಷಣಾಭಿವೃದ್ಧಿಗೆ
ವಾದ ರೀತಿ, ರಾಷ್ಟ್ರೀಯ ಸಂಪತ್ತನ್ನು ಬಳಸುವ ನ
ಎಲ್ಲವೂ ಕಲ್ಪನಾತೀತ! ಸಾಧಕರಿಗೇ ಸಾಧ್ಯ.

ಮಣಿಪಾಲದ ಸೃಷ್ಟಿಕರ್ತ ಡಾ। ಮಾಧವ ಪೈಗಳು ಭ
ಶಾಲಿಗಳು. ಅವರ ಕುಟುಂಬ ಪರಿವಾರ ಬೇರೆಯಲ್ಲ – ನ
ಬೇರೆಯಲ್ಲ – ಇದು ಅವರ ಔದಾರ್ಯ! ಇದರೊಂದಿಗೆ
ದಿದ್ದಾರೆ ಡಾ। ಪೈ. ಮಣಿಪಾಲವನ್ನೊಂದು ವಿದ್ಯಾ ಕೇ
ವನ್ನಾಗಿ ರೂಪಿಸಿದ ಅವರ ಸಮಾಜ ಶಿಲ್ಪ ಆದರಣೀಂ

ಇಂದು ಮೈಸೂರು ವಿಶ್ವವಿದ್ಯಾನಿಲಯ ಯಾವುದಾದರೂ ಕೊರತೆಯ ದುಃಖವನ್ನನುಭವಿಸುತ್ತಿದ್ದಿರಬಹುದು. ಆದರೆ ಈ ಮಣಿಪಾಲದ ಪಾಡೇ ಬೇರೆ! ಇದು ಎಲ್ಲವನ್ನೂ ಮೀರಿಸಿ ನಿಂತ ಒಂದು ಸಂಸ್ಥೆ. ಕರ್ಣಾಟಕದ ನಾಲ್ಕನೆಯ ವಿಶ್ವವಿದ್ಯಾನಿಲಯವೇ ಇದು ಎಂಬಂತೆ ಮೂವತ್ತೆರಡು ಹೈಸ್ಕೂಲು – ಕಾಲೇಜುಗಳನ್ನೊಳಗೊಂಡ ಶಿಕ್ಷಣ ಸಂಸ್ಥೆಗಳ ನಿರ್ದೇಶನ ಮಾಡುತ್ತಿದೆ – "ಅಕಾಡಮಿ ಆಫ್ ಜನರಲ್ ಎಜ್ಯುಕೇಶನ್" ಸಂಸ್ಥೆ. ವೈದ್ಯಕೀಯದಿಂದ ತೊಡಗಿ, ಸಂಗೀತ ಮೊದಲಾದ ವಿವಿಧ ಕಲಾ ಶಿಕ್ಷಣ ವ್ಯವಸ್ಥೆ. ಯಂತ್ರಶಿಲ್ಪ, ವಾಸ್ತುಶಿಲ್ಪ, ಶಿಕ್ಷಣ ತರಬೇತಿ, ಕಲೆ, ವಿಜ್ಞಾನ, ಅರ್ಥಶಾಸ್ತ್ರ, ರಾಜಕೀಯ ಹೀಗೆ ಹತ್ತಾರು ವಿಧದ ಶಿಕ್ಷಣ ಪ್ರಕಾರಗಳಿಗೆಲ್ಲ ದಕ್ಷ ಪ್ರಜಾಪತಿಯಾಗಿ ಮೆರೆದಿದ್ದಾರೆ – ಡಾ। ಮಾಧವ ಪೈ!

೨೩–೫–೧೯೭೪

ಸಾಹಿತ್ಯ ಶಿಲ್ಪಿ

ಸಾಹಿತ್ಯ ಕಲೆಗಳಿಗೆ ಸನ್ಮಾನಕುದುರಿದುದು, ಅದೂ- ಆ ಸ್ವಪ್ರತಿಷ್ಠೆಯ ಜನರ ಮಧ್ಯದಲ್ಲಿ- ಒಂದು ಪವಾಡವೇ ಎನ್ ಬೇಕು. ಅಂತಹ ಪವಾಡ ಪುರುಷರು ಮಂಗಳೂರಿನ ಮಂಗ ಗಂಗೋತ್ರಿಯ ಜನ್ಮದಾತ ಖ್ಯಾತ ರಸಋಷಿ ಪ್ರೊ। ಎಸ್. ವಿ ಪರಮೇಶ್ವರ ಭಟ್ಟರು ಎಂಬುದಾಗಿ ಸಾಹಿತ್ಯಾರಾಧಕ ಶಿಶುವು "ವೇತ್ತಿ ವೇತ್ತಿ" ಎನ್ನುತ್ತಿದೆ. ಈ ಭಾಗದ ಹವ್ಯಕ 'ಭಟ್ಟ ಗಳ ಮತ್ತು ಕೊಂಕಣಿ 'ಭಟ್ಟ'ಗಳ ಮಧ್ಯದಲ್ಲಿ ಈ ಭಟ್ಟರು ಹಲವು ಬಾರಿ 'ಬಟ್' (But?) ಆದರು. ಕೆಲವರಂತೂ ಇವರ ಕೊಟ್ಟ ಸಲಿಗೆಯಿಂದ 'ಓ ಬಟ್ರೇ' ಎಂದು ಸಲಿಗೆಯ ಮಾ ನಿಂದಲೇ ಕರೆದು ಮಾತಾಡಿದರು. ಆದರೆ ಈ ತಾಳ್ಮೆಯ ಮೂರ್ತಿ ಯಾರ ಯಾವ ಮಾತಿಗೂ ರೇಗಿ ಕೊಳ್ಳುವುದ ಇಲ್ಲ. ಕೆಲವರು ಈ ವ್ಯಕ್ತಿಯಲ್ಲಿ ದೋಷವನ್ನೇ ಹುಡು 'ಚುಡಾಯಿಸಿ'ದರೆ ಬಹು ಮಂದಿ ನಿಷ್ಕಲ್ಮಶ ಹೃದಯರೆಂದ ಕೊಂಡಾಡುತ್ತಾರೆ. ಈ ಹೊಗಳಿಕೆ ತೆಗಳಿಕೆಗಳ ಮಧ್ಯದ ಏನೇನೂ ಸದ್ದುಗದ್ದಲವಿಲ್ಲದೆ ಅರುವತ್ತನೇ ವಸಂತಕ್ಕೆ ಕಾಲಿರಿ ದ್ದಾರೆ- ಈ ರಸಋಷಿ!

ಶಿವಮೊಗ್ಗ ಜಿಲ್ಲೆಯ ಮಾಳೂರಿನಲ್ಲಿ ೮-೨-೧೯೧ ರಂದು ಜನಿಸಿದ ಪ್ರೊ। ಭಟ್ಟರು ಅವರ ಪೂರ್ವಜರ ಕಾಲದ ದಕ್ಷಿಣ ಕನ್ನಡ ಜಿಲ್ಲೆಯಿಂದ ವಲಸೆ ಹೋಗಿ ನೆಲಸಿದವರಂ ಹುಟ್ಟಿದ ಮೂರು ವರ್ಷ ತಾಯಿಯನ್ನು ಕಳೆದುಕೊಂಡು ಶಿಕ್ಷ ರಾಗಿದ್ದ ತಂದೆ ಶ್ರೀ ಸದಾಶಿವ ರಾಯರ ಲಾಲನೆ ಪಾಲನೆಯ

ಬೆಳೆದರಂತೆ. ಹರಿಕಥೆ, ನಾಟಕ, ಕೋಲಾಟ, ತಾಳಮದ್ದಳೆ, ಬಯಲಾಟಗಳ ಗೀಳು, ತಂದೆಯಿಂದ ಮಗನಿಗೂ ರಕ್ತಗತವಾಗಿ, ಬಂದಿರಬೇಕು. ರಸಿಕತೆ, ಕಲಾಭಿಮಾನ, ಸಾಹಿತ್ಯಪ್ರೇಮ ಗಳೊಂದಿಗೆ ತಾವೂ ಎತ್ತರಕ್ಕೇರಿದರು. ತಮ್ಮ ಸಾವಿರಾರು ಶಿಷ್ಯರನ್ನೂ ತಮ್ಮೆತ್ತರಕ್ಕೇರಿಸಿಕೊಂಡರು. ತಾನಾಗಿಯೇ ಇವರ ಶಿಷ್ಯವಾತ್ಸಲ್ಯದಿಂದ ಸಾಹಿತ್ಯ ಕ್ಷೇತ್ರಕ್ಕೆ ಕಳೆ ಏರಿತು. ಸಾಹಿತ್ಯ ಪ್ರೇಮಿಗಳು ಕನ್ನಡ ಸಾಹಿತ್ಯದ ಎತ್ತರ ಹೆಚ್ಚೊ ತಮ್ಮ ಪೀಠದ ಎತ್ತರ ಹೆಚ್ಚೊ ಎಂದು ತಿಳಿಯದೆ ಹಲವೆಡೆ ಏರಿದರು; ಕೆಲ ವೆಡೆ ಜಾರಿದರು. ಆದರೆ ಇವರ ರೀತಿ ಇವರಿಗೇ ಮೀಸಲು!

'ನಾನು ಅರುವತ್ತಕ್ಕೆ ಅಡಿಯಿಡುತ್ತಿದ್ದೇನೆ, ಈ ಅವಧಿ ಯಲ್ಲಿ ಕೆರೆ ಕಟ್ಟಲಿಲ್ಲ, ಬಾವಿ ತೋಡಲಿಲ್ಲ, ತೋಪು ನಡಲಿಲ್ಲ, ಸತ್ರ ಇಡಲಿಲ್ಲ. ಒಂದು ಗುಡಿ ನಿರ್ಮಿಸಲಿಲ್ಲ. ಜನರಿಗೆ ಉಪ ಯೋಗ ಬೀಳುವ ಯಾವ ಕಾರ್ಯವನ್ನೂ ಮಾಡಲಿಲ್ಲ. ಅರುವ ತ್ತಾದವರು ಇಂತಹ ಯಾವುದನ್ನಾದರೂ ಮಾಡಬೇಕಂತೆ! ವ್ಯರ್ಥವಾಗಿ ಬದುಕಿದಂತಾಗಬಾರದೆಂದು ಈ ಕಾಳಿದಾಸ ಸಂ ಪುಟವನ್ನು ಈ ಕೆಲಸಕ್ಕೆಲ್ಲ ಸಮನೆಂದು ಭಾವಿಸಿ ತಂದಿದ್ದೇನೆ. ಸ್ವೀಕರಿಸಿ ಒಪ್ಪಿಕೊಳ್ಳಿರೆಂದು ಕೇಳಿಕೊಳ್ಳುತ್ತೇನೆ' ಶ್ರೀಯುತರು ಕಾಳಿದಾಸ ಮಹಾ ಸಂಪುಟವನ್ನು ಕನ್ನಡ ಸಾರಸ್ವತಲೋಕದ ಕೈಗಿತ್ತು ಹೇಳಿದ ಈ ಮಾತು ಅವರ ಸರಳ ಸಹೃದಯ ಸ್ವಭಾವ ಕ್ಕೆ ನಿದರ್ಶನ ಸಾಲದೆ? 'ರಸಋಷಿ'

ಫೆಬ್ರವರಿ ಎಂಟು ಪ್ರೊ। ಭಟ್ಟರ ಜನ್ಮದಿನ. ಅಂದೇ ಅವರು ಮಂಗಳೂರಿನಿಂದ ದಿಲ್ಲಿಗೆ ಹಾರಿದರು. ಕನ್ನಡದ ಕಾಳಿ ದಾಸರು ದಿಲ್ಲಿಯಲ್ಲಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವ ರಿಗೆ ತಮ್ಮ ಕಾಳಿದಾಸ ಕನ್ನಡದ ಮಹಾ ಸಂಪುಟವನ್ನು ಒಪ್ಪಿಸಿ

ಕನ್ನಡದ ಪ್ರಚಾರವನ್ನು ನಡೆಸಿದರು. ಉಪ್ಪು ಕಡಲಿನ ಸಹಿ
ಯನ್ನು ದಟ್ಟಗೊಳಿಸಲು ಅವರು ಬಯಸಿದ್ದಾರೆ. ಸಾಹಿತ
ಅಕಾಡೆಮಿಯಲ್ಲಿಯೂ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಕನ್
ಡದ ಭಾಗ್ಯೋದಯ ಕುದುರಿತೆನ್ನುವುದಕ್ಕೆ ಜಿಲ್ಲೆಯಾದ್ಯಂ
ಅವರ ಶಿಷ್ಯಕೋಟಿ ಹಬ್ಬಿಕೊಂಡಿರುವುದೂ ಯಕ್ಷಗಾನ ಬಯ
ಲಾಟ, ಭೂತದ ಕೋಲಗಳಿಂದ ತೊಡಗಿ ಸಂಘ-ಸಂಸ್ಥೆಗಳಲ್ಲೂ
ಶಾಲಾಕಾಲೇಜುಗಳಲ್ಲೂ ಈ ಸಾಹಿತ್ಯ ಭಿಕ್ಷುವಿನ ಭಾಷಣಗ
ಪ್ರವಾಹ ಹರಿದಿರುವುದೂ ಸಾಕ್ಷಿ. ತಾವು ಅರುವತ್ತರ ಮೆಟ್ಟ
ಲೇರುತ್ತಿರುವಾಗ ತಮ್ಮ ಕೈಯಿಂದ ಬೆಳೆಸಿದ ಮಂಗಳಗಂಗೋತ್ರಿ
ಯನ್ನು, ಐದು ವರ್ಷದ ಶಿಶುವನ್ನು ಹೇಗೆ ತಬ್ಬಲಿಗೊಳಿಸ
ಎಂಬ ಚಿಂತೆ ಅವರಿಗಿಲ್ಲ. ಈ ವ್ಯಕ್ತಿ ಧನ್ಯ- ವ್ಯಕ್ತಿಯ ಶಕ್
ಮಾನ್ಯ.

೧೫-೩-೭೩

ಅಗರಿ ಭಾಗೋತರು

ಯಕ್ಷಗಾನ ಭಾಗವತರಾಟ ಅಥವಾ ದಶಾವತಾರ ಮೇಳ
ಂದರೆ ಜನ ಮೂಗು ಮುರಿಯುತ್ತಿದ್ದ ಕಾಲವೊಂದಿತ್ತು.
ಈಗ ಕಾಲ ಪರಿವರ್ತನೆಯಾಗಿದೆ–ಸುಧಾರಣೆಯಾಗಿದೆ ಎಂದರೆ
ದು ಕಾಲದ ಮಹಿಮೆ ಎನ್ನುವ ಜನ ಈಗಲೂ ಇದ್ದಾರೆ. ಈ
ಶಿಷ್ಟವಾದ ಕಲೆಯನ್ನು ಮೆಚ್ಚುವವರೇ ಮೆಚ್ಚುವುದು, ಮೆಚ್ಚಿ
ದವರನ್ನು ಹುಚ್ಚರೆನ್ನುವುದು ಕಲೆಯನ್ನರ್ಥ ಮಾಡಿಕೊಳ್ಳ
ದವರು. ಕಲೆ ತನ್ನತನವನ್ನು ಕಾಪಾಡಿಕೊಳ್ಳಬೇಕಾದರೆ ಕಲಾ
ದನೂ ತನ್ನತನವನ್ನು ಕಾಪಾಡಿಕೊಂಡು ಬರಬೇಕು. ಅಂತಹ
ಶಿಷ್ಟ ವ್ಯಕ್ತಿತ್ವ– ಈ ಯಕ್ಷಗಾನ ಭಾಗವತರಾಟದ ಕಲೆಯಲ್ಲಿ–
ಶ್ರೀ ಅಗರಿ ಶ್ರೀನಿವಾಸ ಭಾಗವತರದು!

'ಶ್ರೀ ಅಗರಿಯವರು ಯಾರನ್ನೂ ಹಿಂಬಾಲಿಸಿ ಹೋಗುವ
ನವಲ್ಲ ಯಾರೂ ಅವರ ಹಿಂಬಾಲಕರಾಗಬೇಕೆಂದವರಿಗಿಲ್ಲ'
ಅಗರಿ ಭಾಗೋತ'ರ ಬಗ್ಗೆ ಅಭಿಮಾನಿಗಳೊಬ್ಬರ ಈ ಮಾತು
ತಾಂಶ ಸತ್ಯ. ಸ್ವತಃ ಕವಿತಾಶಕ್ತಿ ಉಳ್ಳಂತಹ ಈ ಒಡಕಲು
ಣಕಲು ವ್ಯಕ್ತಿಯಿಂದ ಇಂತಹ ಹೃದಯಂಗಮ ಹಾಡುಗಾರಿಕೆ–
ಧ್ಯವೆ–ಎಂದು ಯಾರೂ ಅಚ್ಚರಿಗೊಳ್ಳಬೇಕು. ಬಾಯ್ತುಂಬ
ಂಬೂಲ ಚರ್ವಣ ಮಾಡಿಕೊಂಡು ಭಾವ ಪೂರ್ಣವಾದ
ಲಾಪನೆಗಳಿಂದ, ಮೋಹನ ರಾಗವನ್ನೋ ಶಂಕರಾಭರಣ–
ರಟಿ ರಾಗಗಳನ್ನೋ ಎಳೆದರೆ ರಾಗಜ್ಞಾನವಿಲ್ಲದ ಅರಸಿಕನೂ
ಸಿಕನಾಗಿ ಬಿಡುತ್ತಾನೆ. ಅವರು ನಿಂತ ಹೆಜ್ಜೆಗೇ ಸಂದರ್ಭಕ್ಕೆ
ಕ್ಕಂತೆ ಭಾವಪೂರ್ಣ ಕವಿತೆಗಳನ್ನು ರಚಿಸಿಕೊಂಡು ಹಾಡುವ

ಆಶುಕವಿಗಳೆಂದೂ ಬಲ್ಲವರು ಬಲ್ಲರು. ಯಕ್ಷಗಾನ ತಾಳಮದ್
ಗಳಲ್ಲಾಗಲೀ, ಬಯಲಾಟಗಳಲ್ಲಾಗಲಿ ಕಲೆಯ ಸಹಜಗು
ವನ್ನೂ ಕಲಾವಿದನ ವೈಶಿಷ್ಟ್ಯವನ್ನೂ ಉಳಿಸಿ ಬೆಳೆಸಿಕೊಳ್ಳ
ದೊಂದೇ ಚಪಲವೆನ್ನಬಹುದಾದರೆ ಅದು ಅವರ ಯಕ್ಷಗ
ರಸಿಕ ಜೀವನದ ವೈಶಿಷ್ಟ್ಯವೇ ಸರಿ.

ಕಲಾವಿದರಾಗಲಿ ಸಾಹಿತಿಗಳಾಗಲಿ ತಮ್ಮ ಅನಂತರ
ಚಪಲ ತಮ್ಮ ಮಕ್ಕಳಿಗೆ ಬೇಡವೇ ಬೇಡ ಎನ್ನುವುದೊಂ
ಸ್ವಭಾವವಿದೆ. ಶ್ರೀ ಅಗರಿ ಅವರು ಈ ಸ್ವಭಾವಕ್ಕೂ ಹೊ
ತಾದವರು. ಇವರ ಮಕ್ಕಳೂ ಹಾಡುಗಾರರೂ ಕವಿಗ
ಆಗಿರುವುದು ಇದಕ್ಕೆ ಸಾಕ್ಷಿ. ನಡುವಯಸ್ಸು ಮೀರಿದ
ತರುಣಬುದ್ಧಿಯ 'ಚುರುಕು'ತನ ಅವರ 'ಭಾಗೋತಿಗೆ'ಗ
ಭಾಗವತರೆಂದರೆ ಭಗವಂತನ ನಿಜವಾದ ಭಕ್ತರೆಂದು ಪೇಜಾ
ಸ್ವಾಮಿಗಳು ಅಪ್ಪಣೆ ಕೊಡಿಸಿದ್ದರು. ಮೂಲ್ಕಿಯಲ್ಲಿ
ಅಗರಿಯವರಿಗಿತ್ತ ಸನ್ಮಾನದಲ್ಲಿ, ಭಗವಂತನ ದಶಾವತಾರಗಳ
ಹಾಡಿ ನುಡಿಸಿ ಪಾಮರರಿಗೆ ಅದರ ಸವಿಯನ್ನು ಕಲಾತ್ಮಕವ
ಮನವರಿಕೆ ಮಾಡಿ ಕೊಡುವ ಈ ಕಲೆ ವಿಶಿಷ್ಟವಾದುದೆಂಬ
ರಲ್ಲಿ ಸಂದೇಹವಿಲ್ಲ. 'ಕಲೆಗೇಕೆ ಕೊಳೆ?' ತೆಂಕು-ಬಡಗ
ಪರಂಪರೆಯನ್ನು ಬೆಳೆಸಿ ಉಳಿಸಿಕೊಂಡು ಬರುವುದರ ಬದಲ
ಅದಕ್ಕೆ ರಾಜಕೀಯದ ಬಣ್ಣ ಬಳಿಯಿಸಿ-'ಇದು ಖರೆ-
ಖೋಟ' ಎನ್ನುವ ವಿವಾದ ಬೇಕೆ? ಶ್ರೀ ಅಗರಿಯವರ ವ್ಯಕ್
ಇದರ ಕಡೆಗೆ ಸುಳಿಯಲಿಲ್ಲ. ಬಡಗಿಗೂ ಮೂಡಕ್ಕೂ ಹೊ
ಜಯಭೇರಿ ಹೊಡಿದು ಬಂದಿದ್ದಾರೆ. ಕಲೆಯೇ ಕಾಯಕ
ಕಲೆಯ ಕಾಯಕದಲ್ಲೇ ಸುಖವನ್ನು ಕಂಡಿದ್ದಾರೆ. ಈ ಬಗ
ಕಲಾವಿದರು ಇವರೊಬ್ಬರೇ ಎಂದು ಕನ್ನಡ ಜಿಲ್ಲೆಯ ಕ

ಮಾನಿಗಳು ಇವರನ್ನು ಆದ್ದೂರಿಯಿಂದ ಸನ್ಮಾನಿಸಲೂ ಮುಂ ದಾಗಿದ್ದಾರೆ!

ಭಾಷಾ ಮಾಧ್ಯಮದಿಂದ ನಮ್ಮ ಶಿಕ್ಷಣ ಕ್ಷೇತ್ರ ಪ್ರೌಢಾ ಸ್ಥೆಗೆ ಮುಟ್ಟಬೇಕು ಎನ್ನುವ ಘೋಷಣೆ ಇತ್ತೀಚೆಗೆ ಕೆಲ ನ್ನಡದ ಕಡು ಭಕ್ತರೆನ್ನಿಸಿಕೊಂಡವರಿಂದ ಕೇಳಿ ಬರುತ್ತದೆ. ಭಾಷಾಮಾಧ್ಯಮದಿಂದ ಆ ಕಾರ್ಯವನ್ನು ಇನ್ನೂ ಸುಲಲಿತವಾಗಿ ಸಾಧಿಸಬಹುದೆಂದು ಕಲಾವಿದರೇ ಹೇಳಬೇಕು. ಸಂಸ್ಕೃತಿ ಮಾಧ್ಯಮದಿಂದ ಸಾಧಿಸುವುದು ಇನ್ನಷ್ಟು ಪರಿಣಾಮಕಾರಿ ಎಂದು ಸುಸಂಸ್ಕೃತ ಕಂಠಗಳು ಘೋಷಿಸುತ್ತಿರಬಹುದು. ನಮ್ಮ ಜನ ತಮ್ಮತನವನ್ನು ಕಾಪಾಡಬೇಕಾದರೆ, 'ಕನ್ನಡಿಗರು ನ್ನಡಿಗರಾಗಿರಬೇಕು. ಭಾರತೀಯರು ಭಾರತೀಯರೇ ಆಗಿರ ಬೇಕು' ಎನ್ನುವ ಆತುರವಿದ್ದರೆ ಮಾತ್ರ ರಾಷ್ಟ್ರೀಯ ಭಾವನೆ ಉಳಿದೀತಲ್ಲದೆ, ಕೇವಲ ಘೋಷಣೆಯಿಂದ ಅದು ಸಾಧ್ಯವಿಲ್ಲ. ಲೆಯ-ಭಾಷೆಯ ಸಾಹಿತ್ಯದ- ಸಂಸ್ಕೃತಿಯ-ಯಾವ ಬಗೆಯ ತುರ್ಮುಖದಿಂದ ನೋಡಿದರೂ ಶ್ರೀ ಅಗರಿಯವರು 'ತನ್ನ ನ'ವನ್ನುಳಿಸಿಕೊಂಡಿದ್ದಾರೆ. ಲೌಕಿಕ ಲಾಭಕ್ಕಾಗಿ ನಾವಿಂದು ಜಕಾರಣಗಳನ್ನೂ ಇನ್ನಾರನ್ನೂ ಗೌರವಿಸಿ ಪೂಜಿಸಿ ಪ್ರಸಾದ ಡೆದು ಕೊಳ್ಳಬಹುದು. ಆದರೆ ಪಾರಲೌಕಿಕ ಲಾಭವಿರುವ ಲೆಯ ಆರಾಧಕರನ್ನು ಗೌರವಿಸಿ ಪಡೆಯಬಹುದಾದ ಗುಣ ತ್ಯೇಕ. ಅದು ಅಗಣಿತ-ಅಲೌಕಿಕಗುಣ ಪೂರ್ಣ!

೧೧-೧೦-'೭೩.

ಹೊಸ ಕಾವ್ಯ ಬ್ರಹ್ಮ!

'ಯಾವ ಮೋಹನ ಮುರಲಿ ಕರೆಯಿತು ದೂರ ತೀ
ನಿನ್ನನು?' ಎಂದು ಕನ್ನಡ ಕಾವ್ಯಲೋಕಕ್ಕೆ ಇಂಪು ದನಿಗೂ
ಸಿದ್ದ ಕವಿ ಗೋಪಾಲ ಕೃಷ್ಣ ಅಡಿಗರಿಗೆ ಐವತ್ತೆಂಟು ತುಂ
ವಾಗ ನಲುವತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್
ಪದವಿ ಕಾದು ನಿಂತಿದೆ. ಅಷ್ಟರಲ್ಲೇ ೧೯೭೨ರ ಉತ್ತ
ಕಾವ್ಯ ಕರ್ತೃಗಳೆಂದು ರಾಜ್ಯ ಸಾಹಿತ್ಯ ಅಕಾಡೆಮಿ ಘೋಷಿ
ಅವರಿಗೆ ಮೂರು ಸಾವಿರ ರೂಪಾಯಿಗಳ ಬಹುಮ
ಕೊಡಲು ನಿರ್ಧರಿಸಿದೆ ಅಷ್ಟರೊಳಗಾಗಿ ಶ್ರೀ ಅಡಿಗರು ಅ
ಕದ ಮೆಸಾಚ್ಯುಸೆಟ್ಸ್ ವಿಶ್ವವಿದ್ಯಾನಿಲಯದ ಕರೆಯ ಮೇ
ಕನ್ನಡ ಕಾವ್ಯದ ಮೇಲೆ ವ್ಯಾಖ್ಯಾನ ನೀಡಲು ಅಮೇರಿಕ
ತೆರಳಿ ಬಿಟ್ಟಿದ್ದಾರೆ 'ನೀ ಪರಿಮಳಿಸ ಬೇಡವೆ, ಓ ಎನ್ನ ಕಸ್ತು
ಎಂದರದು ಪರಿಮಳಿಸದಿದ್ದೀತೆ? ಶ್ರೀ ಅಡಿಗರು ಕನ್ನ
ಕಸ್ತೂರಿಯಾಗಿದ್ದಾರೆ।

ಶ್ರೀ ಅಡಿಗರ ಕಾವ್ಯ ಪಂಥ–ನವ್ಯ ಪಂಥ. ನವ್
ಸೇರಿ ಈ ಪಂಥವನ್ನು ನಡೆಸಿ ತಾವು ಬಹಳ ಮುಂದುವರಿ
ರೆಂದುಕೊಂಡಿದ್ದಾರೆ. ಅಡಿಗರು ಮಾತ್ರ ಕದಲದೆ ನಿಂತ
ನಿಂತಿದ್ದಾರೆ. ಅದಕ್ಕಾಗಿ ನವ್ಯರ ಹೇಳಿಕೆಯಂತೆ ಅಡಿಗೋ
ನವ್ಯಪಂಥ'ವೊಂದರ ಸೃಷ್ಟಿಯಾಯಿತು. ನವ್ಯರ ಪ್ರ
ಶ್ರೀ ಅಡಿಗರೂ ತಮ್ಮ ಮಾರ್ಗದಲ್ಲೆ ನಡೆದು ಬರಬೇಕೆ
ದಾಗಿತ್ತೆಂದು ಕೆಲ ನವ್ಯನವ್ಯೋತ್ತರಿಗಳ ಅಂಬೋಣ!

ಶ್ರೀ ಅಡಿಗರೆಂದರೆ ಒಂದು ವ್ಯಕ್ತಿನಾಮ ಮಾತ್ರವಲ್ಲ,
ಇತ್ತೀಚಿನ ಸಾಹಿತ್ಯ ಮಾರ್ಗದಲ್ಲೊಂದು ಕ್ರಾಂತಿಯ ಸಂಕೇತ!
ಅವರು 'ನಡೆದು ಬಂದ ದಾರಿ' ಈ ಸಂಕೇತ, ಕ್ರಾಂ
ತಿಯ ಸೂಚನೆಯನ್ನು ತಂದಿತು. ಚಂಡೆ ಮದ್ದಳೆ
ಬಾರಿಸಿ, ಜೊತೆಗೆ ಭೂಮಿಗೀತ ಹಾಡಿದರು; ವಿದ್ಯಾವಂತ
ತರುಣ ಸಮೂಹ ಎಚ್ಚರಗೊಳ್ಳುವಂತಾಯಿತು. ಎಚ್ಚರ
ಗೊಂಡವರು ಹುಚ್ಚೆದ್ದರು. 'ಬರೆದಂತೆ ಮಸಿ ಹರಿದು ಬರು
ವುದೇ ಚಂದ' ಎಂದು ಬಗೆದರು. ಆಚಾರ-ವಿಚಾರ ನೀತಿ-
ನಿಯಮಗಳ ಗೋಡೆಯನ್ನೊಡೆದು ಆದರಾಚೆಗೆ ಇಣುಕಿದರು.
ಕನ್ನಡದ 'ನುಡಿವಳಿ'ಗೆ ಹೊಸ ತಿರುವನ್ನ ತಂದರು– ಈ ನವ್ಯರು
ಧ್ವನ್ಯಾತ್ಮಕವಾಗಿ ಬರೆದ 'ಭಾವತರಂಗ'ದ ಭಾವ ಕುಗ್ಗಿ, ನಾಟ
ಕೀಯತೆ' ಅನುಭವ ಶೋಧನೆಗಳೆಲ್ಲ ಆದವು. ಧ್ವನ್ಯಾತ್ಮಕಂ
ಕಾವ್ಯಂ' ಎಂದ ಆನಂದವರ್ಧನಾಚಾರ್ಯರೇ ಮೊದಲಾದ
ಲಾಕ್ಷಣಿಕ ಧ್ವನಿಕಾರರಿಗೆ, ಲಕ್ಷ್ಯವಾಗಬಲ್ಲ ನುಡಿಯಲ್ಲಿ– ಕಟ್ಟು
ವೆವು ನಾವು ಎಂದು ಕಟ್ಟಿಯೇ ಬಿಟ್ಟರು–ಕಾವ್ಯ ಗೋಪುರವನ್ನು!
ಕಾವ್ಯದಲ್ಲಿ ನವ್ಯ ಕಲಾವಂತಿಕೆಯನ್ನು ಬೆಳೆಸಿದರು. ವ್ಯಂಗ್ಯ
ನುಡಿಗಟ್ಟಿನಲ್ಲಿ ಅನುಭವದ ಸಾರವನ್ನು ಹೀರಿದರು. ಭೂತ
ವರ್ತಮಾನಗಳಂತಹ ಕೃತಿಗಳನ್ನು ಬೆಳೆಸಿದರು. ಅಕ್ಷರ ಪ್ರಕಾ
ಶನದ 'ಸಾಕ್ಷಿ' ಸಂಪಾದಕರಾದರು. ಮೈಸೂರಿನಲ್ಲಿ ಇಂಗ್ಲೀಷ್
ಪ್ರಾಧ್ಯಾಪಕರಾಗಿ, ಸಾಗರದಲ್ಲಿ ಉಡುಪಿಯ ಪೂರ್ಣಪ್ರಜ್ಞ
ಕಾಲೇಜುಗಳಲ್ಲಿ ಪ್ರಾಚಾರ್ಯಮುಖ್ಯರಾಗಿ ಸೇವೆ ಸಲ್ಲಿಸುತ್ತಿದ್ದು
ಜೊತೆಜೊತೆಗೇ ನವ್ಯಲೋಲುಪರಾಗಿ ಸಾಹಿತ್ಯ ರಚನೆಯಲ್ಲೇ
ಮಗ್ನರಾದರು, ಶಿಕ್ಷಕರಾಗಿದ್ದವರನ್ನು ರಾಜಕೀಯ ಆಕರ್ಷಿತೋ
ಅಥವಾ ಸರಕಾರದ ಆಡಳಿತ ನೀತಿಯಿಂದ ರೊಚ್ಚಿಗೆದ್ದರೊ-

ಅಂತೂ ಚುನಾವಣಾರಂಗಕ್ಕಿವರನ್ನು ದುಮುಕಿಸಿ. ಕೈಸುಟ
ಗೊಳ್ಳುವ ಪರಿಸ್ಥಿತಿಯೊಂದು ಬಂದೊದಗಿತು.

ಶ್ರೀ ಅಡಿಗರು ನಿರಂತರ ನಾಲ್ಕು ದಶಕಗಳ ಸಾಹಿತ್ಯಸೇ
ನಡೆಸಿದರು. ಅದರ ಪ್ರತಿಫಲವನ್ನೀಗ ಅವರೇ ಅನುಭವಿಸ
ತ್ತಿದ್ದಾರೆ. ನವ್ಯೋತ್ತರರಿಗೆ ಇವರೊಬ್ಬ ಸಮಸ್ಯಾತ್ಮಕ ವ್ಯ
ಯಾಗಿ ತೋರಿದ್ದಾರೆ. ಪತ್ರಿಕೋದ್ಯಮಿ ಬರೆಹಾನ್ನ ವೃತ್ತಿಂ
ಶ್ರೀ ಅಡಿಗರು ರಾಜಕಾರಣಿಪುರುಷ ಸಾಹಿತಿಯೊ? ಅಥ
ಸಾಹಿತ್ಯ ರಾಜಕಾರಣಿಯೊ? ಎಂಬುದಿನ್ನೂ ಸಮಸ್ಯೆಯಾಗಿಯೆ
ಉಳಿದಿರುವಾಗ, ಅವರ 'ವರ್ಧಮಾನ' ಕವನಸಂಕಲನ ಕನ್ನಡ
ಉತ್ತಮ ಕೃತಿ ಎಂದು ಮಾನ್ಯವಾಗಿದೆ. ಶ್ರೀಯುತರಿಗೆ ಅ
ವಂದನೆ! ಆದರೆ ಕಾವ್ಯಕ್ಷೇತ್ರದಲ್ಲೊಂದು ತಳಮಳವೆದ್ದಿ
ಅದೇನೆಂದು ಯೋಚಿಸಬೇಕಾಗಿದೆ.

೧೧-೪-'

ಪಾಂಡಿತ್ಯದ ಪೂರ್ಣಕುಂಭ

'ಬಡವಂ ಬಲ್ಲಿದನಾಗನೇ' ಎಂದ ಪಾಲ್ಕುರಿಕೆ ಸೋಮ ನಾಥ ಕವಿಯಂಥ ಕವಿಗಳು ಇತಿಹಾಸದಲ್ಲಿಯೂ ಇದ್ದರು–ವರ್ತಮಾನ ಕಾಲದಲ್ಲಿ–ಭವಿಷ್ಯದಲ್ಲಿಯೂ ಕಾಣ ಸಿಗುವರು. ಆದರೂ ಪಾಂಡಿತ್ಯ ಸಂಪನ್ನರ ಸಂಖ್ಯೆ ಮಿತಿ! ಈ ಮಿತಿಯಲ್ಲಿ ದೊರೆಯುವಂಥವರಲ್ಲಿ ಶ್ರೀ ಗುಂಡಮಿ ವಿಷ್ಣುಮೂರ್ತಿ ಭಟ್ಟರೂ ಒಬ್ಬರು!

ಐವತ್ತಾರರ ಹರಯದ ಈ ವ್ಯಕ್ತಿ, ನಿರಂತರ ವಾಗ್ದೇವತೆಯ ಆರಾಧಕರಾಗಿ ಮೈಸೂರಿನ ಮಹಾರಾಜ ಸಂಸ್ಕೃತ ಕಲಾಶಾಲೆಯ ಅಲಂಕಾರ ಶಾಸ್ತ್ರದ ಪ್ರಾಚಾರ್ಯರು, ಆರ್ಯ ಸಂಸ್ಕೃತಿಯ ಪ್ರತಿರೂಪ ಎನ್ನುವಂತೆ, ವ್ಯಾಕರಣ, ತರ್ಕ, ವೇದಾಂತಾದಿ ನಾಲ್ಕಾರು ಶಾಸ್ತ್ರಗಳಲ್ಲಿ ವಿದ್ವತ್ತನ್ನು ಗಳಿಸಿದ ಪಂಡಿತರು. ಸಂಸ್ಕೃತದ ಜೊತೆಗೆ ಕನ್ನಡ ಮತ್ತು ಹಿಂದಿಗಳಲ್ಲಿಯೂ ಪದವಿ ಪಡೆದವರು ಸಂಸ್ಕೃತ ಶಾಸ್ತ್ರ ರಾಶಿಯಿಂದ, ಕಾವ್ಯ ರಾಶಿಯಿಂದ, ದರ್ಶನಗಳನ್ನು ಕನ್ನಡಕ್ಕೆ ಭಟ್ಟಿ ಇಳಿಸುವುದೊಂದರಲ್ಲೇ ಅವರ ಸಾಧನೆ. ಈ ಸಾಧನೆಯಿಂದಾಗಿ ಇವರೊಬ್ಬ ಆದರ್ಶ ಅಧ್ಯಾಪಕರೆಂದು ರಾಷ್ಟ್ರಮಾನ್ಯರಾಗ ಬೇಕು!

ಉಡುಪಿ ತಾಲೂಕಿನ ಗುಂಡಮಿ ಹುಟ್ಟೂರು ಬಡಕುಟುಂಬದಲ್ಲಿ ಜನನ, ಬಾಲ್ಯದಲ್ಲಿ ವಿದ್ಯಾಭ್ಯಾಸಕ್ಕೂ ಬಡತನ! ಸಂಸ್ಕೃತಾಭ್ಯಾಸದಿಂದ ಸಂಪನ್ನರಾಗಬೇಕೆಂಬುದು ಮನದಂತರಾಳದ ಬಡಿ! ಈ ಭಾರವನ್ನು ಹೊತ್ತು ಹುಟ್ಟೂರವನ್ನು ಬಿಟ್ಟು ಘಟ್ಟ ಹತ್ತಿದರು. ಮೈಸೂರು ನಗರದಲ್ಲಿ ವಾಸ, ಸಂಸ್ಕೃತ ಕಲಾ

ಶಾಲೆಯಲ್ಲಿ ನಿರಂತರ ಅಧ್ಯಯನ, ಅಧ್ಯಾಪನಗಳ ಜೊ
ಸ್ಥಾನ-ಮಾನ. ಹೀಗೆ ಹದಿನೆಂಟರ ಹರಯದಿಂದ ಇಂ
ವರೆಗೂ ಸಂಸ್ಕೃತ ಸಂಪತ್ತಿನೊಡನೆ ಬಾಳ್ವೆ, ಇಪ್ಪತ್ತೆಂಟು ವ
ಗಳ ಅಧ್ಯಾಪನದೊಂದಿಗೆ ಮೂವತ್ತಕ್ಕೂ ಮಿಕ್ಕಿ ಸಂಸ್ಕೃತ
ಗಳ ಕನ್ನಡೀಕರಣ, ನ್ಯಾಯ ಸಿದ್ಧಾಂತ, ವ್ಯಾಕರಣ, ಟಿಪ್ಪ
ಸಹಿತ ಅಮರಕೋಶ, ಕಾಳಿದಾಸನ ಕೃತಿಗಳ ಅನುವಾದ, ಪ
ಮಹಾ ಕಾವ್ಯಗಳ ಕನ್ನಡ ರೂಪ, ಹಲವು ಲಕ್ಷಣ ಗ್ರಂಥ
ಭಾವಾನುವಾದ- ಹೀಗೆ ಸೃಷ್ಟಿಸಿ ಸಾಹಿತ್ಯ ಸಂತಾನದ
ಮೀರಿಸಿದ ಶ್ರೀ ಭಟ್ಟರು. ಸಾಯಣ ಮಾಧವರ ಭಾ
ಸರ್ವದರ್ಶನ ಸಂಗ್ರಹ (ಬೌದ್ಧ, ಜೈನ, ರಾಮಾನುಜ, ಪೂ
ಪ್ರಜ್ಞ, ಶಂಕರಾದಿ ೧೬ ದರ್ಶನಗಳ ಅನುವಾದ, ಕನ್ನಡ
ಗ್ರಂಥಗಳನ್ನು ಪ್ರಕಟಿಸಿ, ಕನ್ನಡ ವಾಗ್ದೇವಿಯ ಭಂಡಾರವ
ತುಂಬಿದ್ದಾರೆ. 'ದರ್ಶನ ಶಾಸ್ತ್ರಗಳು ದರ್ಶನ ಪ್ರಕಾಶನವ
ಮೈಸೂರಿನ ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ।
ಜ. ಗೌ. ಅವರು ಬಿಡುಗಡೆ ಮಾಡಿದ ಸಂಭ್ರಮದ ಬೆ
ಇದೀಗ ಶ್ರೀ ಜಿ, ವಿಷ್ಣುಮೂರ್ತಿ ಭಟ್ಟರನ್ನು ಅವರ
ಕೋಟಿ, ಹಾಗೂ ಅಭಿಮಾನಿಗಳೆಲ್ಲ ಸೇರಿ ವಿದ್ಯಾ ಮಂತ್ರಿ
ಹಿರಿತನದಲ್ಲಿ ಸನ್ಮಾನಿಸಿ-ನಿಧಿ ಸಮರ್ಪಿಸಲು ಮುಂದೆ ಬಂ
ವುದು ಸ್ವಾಗತಾರ್ಹ.

ರಾಜ ಮಹಾರಾಜರ ಕಾಲದಲ್ಲಿ ಕವಿಗಳಿಗೆ ಗಣನೀ
ಸ್ಥಾನಮಾನಗಳಿದ್ದುವು. ರಾಜಕಾರಣಿಗಳ ಕಾಲದಲ್ಲಿ ಅ
ದೂರವಾಗುವುದೋ ಎಂಬ ಭಯವಿತ್ತು. ಆದರೆ ಇತ್ತೀ
ಹಬ್ಬ ಹರಿದಿನಗಳಲ್ಲಿಯೂ ಕವಿ ಪೂಜೆ, ಕಾವ್ಯಾರಾಧನೆ
ನಡೆಯುತ್ತವೆ. ಅಂತಹ ಕಾರ್ಯ ಪರಂಪರೆ ಉಳಿದುಕೊಂಡ

ಈ ಯುಗದ ಭಾಗ್ಯ. ಶ್ರೀ ಭಟ್ಟರ ಉದ್ದೇಶ, ಸಂಸ್ಕೃತದ ಸಾರವನ್ನು ಕನ್ನಡದಲ್ಲಿ ಪ್ರತಿಯೊಬ್ಬನೂ ತಿಳಿದುಕೊಳ್ಳುವಂತಾಗಬೇಕೆಂಬುದಂತೆ! ಅದರಂತೆ ಅವರ ನಿರಂತರ ಪರಿಶ್ರಮ. ತಮ್ಮ ಆರ್ಜಿತ ಸಂಪತ್ತನ್ನೆಲ್ಲ ಇದಕ್ಕೇ ವಿನಿಯೋಗಿಸಿದ್ದಾರೆ. ವಯೋವೃದ್ಧರಾದ ಎಷ್ಟೋ ಮಂದಿ ಇವರ ಅಭಿಮಾನಿಗಳು, ಶಿಷ್ಯರು ಮಹಾರಾಜ ಸಂಸ್ಕೃತ ಕಾಲೇಜಿನ ಸರಸ್ವತೀ ಭಂಡಾರ ಇವರ ಪುಣ್ಯ ಕ್ಷೇತ್ರ. ಇಂತಹ ವ್ಯಕ್ತಿಗಳು ವಿರಳವಾಗಿ ದೊರೆಯುತ್ತಾರೆ- ಎಂದೇ ಮೈಸೂರಿನ ರಾಜಮನೆತನವೂ ಇವರನ್ನು ಗೌರವಿಸಿದೆ. ಇಂದೀಗ ರಾಜ್ಯಸರಕಾರವೂ ಕೇಂದ್ರ ಸರಕಾರವೂ ಗೌರವಿಸಲು ಮುಂದೆ ಬಂದಿದೆ. ಈ ವಿಪುಲ ಪಾಂಡಿತ್ಯವನ್ನು ಮೊಗೆಮೊಗೆದು ಸುರಿದುಕೊಳ್ಳುವ ಜನ ಧನ್ಯ! ಈ ಪಾಂಡಿತ್ಯದ ಕುಂಭ ಮಾನ್ಯ.

೨೧-೨-೭೪

ಜ್ಞಾನ ಗಂಗೋತ್ರಿಯ ನಾವಿಕ

"ಸ್ಥಿತಪ್ರಜ್ಞಸ್ಯ ಕಾ ಭಾಷಾ" – ಸ್ಥಿತಪ್ರಜ್ಞನ ವರ್ತ
ಮಾನವೇನು – ಎಂದು ನರನು ಹರಿಯಲ್ಲಿ ಕೇಳಿದನೆಂಬುದು
ಗೀತಾಧ್ಯಯನದಲ್ಲಿ ಸಾಂಖ್ಯಯೋಗದ ಸೊಲ್ಲು. ಈ ಸ್ಥಿ
ಪ್ರಜ್ಞರು ಎಂದೆಂದೂ ಇರುತ್ತಾರೆ. ಪ್ರಪಂಚದ ಆಗುಹೋಗು
ಗಳಿಗೆಲ್ಲ ಹೊಂದಿಕೊಂಡು, ಧ್ಯೇಯದತ್ತ ಸಾಗುವ ಕರ್ಮ
ಯೋಗಿಗಳೇ ಈ 'ಸ್ಥಿತಪ್ರಜ್ಞ'ರಾಗಿರುತ್ತಾರೆ. ಇಂಥ ಸ್ಥಿ
ಪ್ರಜ್ಞ ಕರ್ಮಯೋಗಿಗಳಲ್ಲಿ 'ಜ್ಞಾನಗಂಗೋತ್ರಿ'ಯ ಮಹ
ಸಾಧಕ 'ನಿರಂಜನ'ರೂ ಒಬ್ಬರೆನ್ನಬಹುದು!

"ಏಳು ಸಂಪುಟಗಳಲ್ಲಿ ಹದಿನೇಳು ಲಕ್ಷದಷ್ಟು ಪದಗಳ
ತುಂಬಿದ ಐದು ಸಾವಿರ ಪುಟಗಳ ಐವತ್ತೇಳು ತಿಂಗಳ ಜ್ಞಾ
ಸತ್ರಕ್ಕೆ ಮೊನ್ನೆ ಮೊನ್ನೆ ಮಂಗಳ ಹಾಡಿದರು. ಎಪ್ಪತ್ತೆಂಟ
ಬಣ್ಣದ ಪುಟಗಳು, ಮುನ್ನೂರು ಬಣ್ಣದ ಚಿತ್ರ, ಮೂರ
ಸಾವಿರಕ್ಕೂ ಮಿಕ್ಕಿ ರೇಖಾಚಿತ್ರ, ವರ್ಣರಂಜಿತ ಹೊದಿಕೆ
ನಾಲ್ಕು ಸಾವಿರದಷ್ಟು ಲೇಖಕರೂ ಸೇರಿದ ಈ ಯಜ್ಞದ
ಐದುವರೆ ಲಕ್ಷ ರೂಪಾಯಿ ಕರಗಿಸಿದರು! ನಿಗದಿಯಾ
ಕಾಲಕ್ಕೂ ಮೊದಲು, ಮಿತಿಗೂ ಕಡಿಮೆ ವೆಚ್ಚದಲ್ಲಿ ಈ ಮಹ
ಕಾರ್ಯಸಾಧನೆಯಲ್ಲಿ ಕೃತಕೃತ್ಯರಾದರು".

ಎಳೆಯರ ಬಳಗಕ್ಕೆ ಹಳೆಯರು ಸೇರಿ, ಕೊಟ್ಟ
ಉಡುಗೊರೆಗೆ ಶ್ರೀ ನಿರಂಜನರು ಅಧ್ವರ್ಯು. ಮೈಸೂರ

ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ। ದೇ. ಜ. ಗೌ. ಹೋತ್ರ, ಅ. ಕೃ. ಭ. ರಂತಹ ಹಲವು ಮಂದಿ ಕಾರ್ಯ ನಿರತರು ಉದ್ಗಾತೃಗಳಾಗಿ, ಕರ್ಣಾಟಕ ಸಹಕಾರಿ ಪ್ರಕಾಶನ ಸಂಸ್ಥೆಯ ಬೃಹತ್ತ್ವದಲ್ಲಿ ಈ ಜ್ಞಾನಸತ್ರ ನಡೆಯಿತು. ಕರಾ ವಳಿಯ ಕನ್ನಡಿಗರೇ ಹೆಚ್ಚಾಗಿ ಸೇರಿರುವ ಈ ಯಜ್ಞದ ಹವಿರ್ಭಾಗವೆಲ್ಲಾ ಮುಂದಿನ ಕನ್ನಡ ಪೀಳಿಗೆಗೇ ಸಲ್ಲುವುದು. 'ಬಾಲವನ'ದಂತಹ ಎಳೆಯರ ವಿಶ್ವಕೋಶವನ್ನು ಕಡಲಕರೆಯ ಭಾರ್ಗವರಾದ ಡಾ। ಶಿವರಾಮ ಕಾರಂತರು ಪುತ್ತೂರಿನಂತಹ ಹಳ್ಳಿಊರಿನಲ್ಲಿ ಕುಳಿತು ಪ್ರಯೋಗಾತ್ಮಕವಾಗಿ, ಸರಕಾರದಿಂ ದೇನೂ ಸಹಾಯ ಪಡೆಯದೆ, ಸ್ವಸಾಮರ್ಥ್ಯದಿಂದ ಸಾಧಿ ಸಿದ್ದಾಗ ಅವರನ್ನು ಯಾರೂ ಮಾತಾಡಿಸಿರಲಿಲ್ಲವಂತೆ. ಆದರೆ ಇಂದು? ಅದಕ್ಕೇ ಎನ್ನುವುದು 'ಕಾಲಾಯ ತಸ್ಮೈ ನಮಃ' ಎಂದು. ಎಲ್ಲದಕ್ಕೂ ಕಾಲವೇ ಕಾರಣ. ಈ ಸ್ಥಿತಪ್ರಜ್ಞರಿಗೆ ಕಾಲ ಹೇಗೆ ನೆರವಾಯಿತು – ಎಂದರೆ ಅದೂ ಒಂದು ತಪಸ್ಸೇ ಸರಿ!

'ನಿರಂಜನ' – ಗುಪ್ತನಾಮ ಬರಹಗಾರನಾಗಿ – ಹರಿತ ವಾದ ಲೇಖನಿಯಿಂದ ಇಳಿಸಿಕೊಂಡುದು! ಕುಳಕುಂದ ಶಿವರಾವ್ – ನಿಜನಾಮ! ಬಡತನದ ಬೇಗೆಯಲ್ಲಿ ಬಳಲಿ, ತೊಳಲಿದವರು. ಸುಬ್ರಹ್ಮಣ್ಯದ ಸಮೀಪದ ಕುಳಕುಂದ ಎಂಬಲ್ಲಿ ಹುಟ್ಟಿ, ನೀಲೇಶ್ವರದ ರಾಜರ ಹೈಸ್ಕೂಲಿನಷ್ಟು ದೂರದಲ್ಲಿ ಓದುತ್ತಿದ್ದಾಗಲೇ 'ಪ್ರಗತಿಶೀಲ' ಲೇಖನ ಸುಳಿಯಲ್ಲಿ ಸುಳಿ ವೆಗೆದು ಬೆಳೆದರು. ಗಾಂಧೀವಾದ – ಮಾರ್ಕ್ಸ್‌ವಾದಗಳಿಗೆ ಸೇತುವೆಯಂತಾದರು. ಬರಹಗಾರರ ಬವಣೆಯನ್ನೆಲ್ಲ ಅನು

ಭವಿಸಿದ ಸಾಮ್ಯವಾದಿ ಗರಡಿಯಲ್ಲಿ ಪಳಗಿದರು. ಮಂಗಳೂ
'ರಾಷ್ಟ್ರಬಂಧು'ವಿನಿಂದ ತೊಡಗಿ ಕನ್ನಡ ನಾಡಿನ ಪತ್ರಿಕೆಗಳಲ್ಲಿ
ಕೈಯಾಡಿಸಿದರು. ಕಥೆಗಳನ್ನು ಬರೆದೋಡಾಡಿಸಿದರು. ರಾ
ಕೀಯ - ಕ್ರಾಂತಿಕಾರ ಸಾಹಿತ್ಯ- ಪ್ರಗತಿಶೀಲ ಸಾಹಿತ್ಯ-
ಮೆಟ್ಟಲಲ್ಲೇರಿದರು. ಸ್ವಾತಂತ್ರ್ಯ ಪೂರ್ವದ ಒಂದೆರಡು ದ
ಗಳು ಪ್ರಗತಿಶೀಲ ಸಾಹಿತ್ಯಕ್ಕೆ ಇಂದು 'ನವ್ಯ ಸಾಹಿತ್ಯ'ಕ್ಕಿದ್
ತೆಯೇ ಪ್ರಚಾರ ಪ್ರಸಿದ್ಧಿಗಳಿದ್ದವು. ಆ ಕಾಲದಲ್ಲಿ ಪ್ರಗತಿಶೀ
ಲೇಖಕರಾಗಿ, ಕವಿ ಕಡೆಂಗೋಡ್ಲು; ಪುಸ್ತಕ ಪ್ರಪಂಚದ
ಶಂಕರ ಭಟ್ಟರು; ಬಿ. ಈಶ್ವರ ಭಟ್ಟರೇ ಮೊದಲಾದವರ ಜೊ
ಓಡಾಡಿ, ಅ. ನ. ಕೃ. ಅವರಂತಹ ಪ್ರಗತಿಶೀಲ ಪಿತಾಮ
ರೊಂದಿಗೆ ಪ್ರತಿಸ್ಪರ್ಧಿಯಂತೆ ಸಾಹಿತ್ಯಕ್ಕೊಂದು ಕಳೆಕಟ್ಟಿದರ
ಕ್ರಾಂತಿಕಾರಿಗಳಾಗಿ ಸಾಮ್ಯವಾದೀ ಚಳವಳ- ಭೂಗತರ
ಬರೆಹಾನ್ನ ಜೀವನ- ಇದಕ್ಕಾಗಿ ಕುಳಕುಂದ ಶಿವರಾಯರ
'ನಿರಂಜನ'ರಾದರು. ಗುಪ್ತ ನಾಮಧಾರಿಗಳಾಗಿ ಲೇಖನಿ
ಮೊನಚಿನಿಂದ ಯುದ್ಧ ಹೂಡಿದರು! ಸಾಮಾಜಿಕ ಹಿತ ಸಾ
ಯಲ್ಲಿ ಯಾರ ಕಾಲಿಗೂ ಎರಗದೆ ತಮ್ಮದೇ ದಾರಿ ಹಿಡಿ
'ಸ್ಥಿತಪ್ರಜ್ಞ'ರಾದರು. ಬೆಂಗಳೂರಿನಲ್ಲಿ ಲೇಖನ ವ್ಯವಸಾ
ಬೆಳಗಿಸುತ್ತಿದ್ದಂತೆ. ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದ ಡ
ಅನುಪಮಾ ಒಲಿದು ಕೈಹಿಡಿದು ಮೇಲೆತ್ತಿದರು. ಜ್ಞಾ
ಗಂಗೋತ್ರಿಗೊಬ್ಬ ಸ್ಥಿತಪ್ರಜ್ಞನ ಅವಶ್ಯವಿತ್ತು. ಸುಖ ಸಂಸ
ವನ್ನು ಅರಸುತ್ತ ಬಂತು ಕೀರ್ತಿ.

'ರಂಗಮ್ಮನ ವಠಾರ'ದಲ್ಲಿ ಕನ್ನಡ ನಾಡಿಗೆ ಕಂಡ ನಿ
ಜನರು ಇಬ್ಬರು ಮಕ್ಕಳ ತಂದೆಯಾಗಿ, ಐವತ್ತರ ಗಡಿ ದ

ಬೇಕಾದರೆ ಮೊದಲೇ `ಊರಗೋಲು ಹಿಡಿದು ಅಡ್ಡಾಡುವ ಪರಿಸ್ಥಿತಿಗೆ ಬಂದಿದ್ದಾರೆಂದರೆ ಅದೂ ಕಾಲವೇ! ಗುಂಡು ಮುಖದ ಬಿಗುಮಾತಿನ ಈ ವ್ಯಕ್ತಿ ಜ್ಞಾನ ಗಂಗೋತ್ರಿ ಯಜ್ಞದ ಪೂರ್ಣಾಹುತಿ ಗೈದು, ಮಂಗಲ ಹಾಡಿದ ಪುಣ್ಯಭಾಗಿಗಳು. ಅವರ ಈ ಪುಣ್ಯಭಾಗಕ್ಕೆ ನೆರವಾದವರೂ ಧನ್ಯರು. ಅವರನ್ನು ಕೈ ಹಿಡಿದು ಮೇಲೆತ್ತಿದವರಂತೂ ಭಾಗ್ಯಶಾಲಿಗಳೇ ಸರಿ. ಅದರಿಂದ ಕನ್ನಡದ ಕಂದಮ್ಮಗಳು ಗಳಿಸಿಕೊಳ್ಳುವ ಲಾಭವೆಷ್ಟೆಂದು ...ನ್ನೂ ಕಾದು ನೋಡಬೇಕಷ್ಟೆ!

ಎಪ್ರಿಲ್ ೧೯೭೩

ಐತಿಹಾಸಿಕ 'ರೂವಾರಿ'

'ಬಲ್ಲಿರೇನಯ್ಯ!'

"ಇರುವಂಥಾ ಸ್ಥಳ!"

"ಪೌದನಪುರಕ್ಕೆ ಯಾರೆಂದು ಕೇಳಿದ್ದೀರಿ....?"....

–ಹೀಗೆಂದು ಐತಿಹಾಸಿಕ 'ರೂವಾರಿ' ಶ್ರೀರಂಜಾಳ ಗೋಪಾಲ ಶೆಣೈ ಅವರು, ಯಕ್ಷಗಾನದ ಭಾಗವತರಾಗಿ, 'ಸಭಾ ಕಲಾಸ್' ಮುಗಿಸಿ ಎದ್ದು ನಿಲ್ಲುವ, ಕಾರ್ಕಳದ ಕರಿಕಲ್ಲಿನ ರೂಪ ಬಾಹುಬಲಿ ಮಹಾರಾಜನನ್ನು ಮಾತಾಡಿಸಬಹುದು ಈ ಐತಿಹಾಸಿಕ ಘಟನೆಯನ್ನು ಸ್ಮರಿಸಿಕೊಂಡಾಗ, ಸಾವಿರಾರು ವರ್ಷಗಳ ಹಿಂದಕ್ಕೂ ಮುಂದಕ್ಕೂ ಮನಸ್ಸೊಮ್ಮೆ ಓಡಾಡಿದಾಗ ಯಾರಿಗೆ ತಾನೆ ಮೈ ಮರೆಯುವ ಪರಿಸ್ಥಿತಿ ಬಾರದಿದ್ದೀತು? ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಹೊರಟು ನಿಂತ ಶ್ರೀ ಬಾಹುಬಲಿಯ ಗೊಮ್ಮಟ ಮೂರ್ತಿಯನ್ನು ಸಂಭ್ರಮದಿಂದ ಬೀಳ್ಕೊಡಲು ಕಾರ್ಕಳದಲ್ಲಿ ಸಕಲ ಸನ್ನಾಹಗಳಾಗಿವೆ. ಈ ಮಧ್ಯೆ ಶಿಲ್ಪಿ ಶ್ರೀ ರೆಂಜಾಳರನ್ನೂ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರನ್ನೂ ಸನ್ಮಾನಿಸುವಂತಹ ಮತ್ತು ಅವರೊಂದಿಗೆ ಕಾರ್ಕಳದ ಕರಿಕಲ್ಲಿನೊಳಗಿಂದ ಎದ್ದು ನಿಂ ಮಹಾ ಪುರುಷಾಕೃತಿ ಬಾಹುಬಲಿಯನ್ನು ಇವರೆಲ್ಲರ ಜೊತೆ ಐತಿಹಾಸಿಕ ದರ್ಶನವನ್ನೂ ಮಾಡಿದಾಗ ಪುಲಕಿತ ಶರೀರಗಳಾಗ ತ್ತೇವೆ-ಪ್ರೇಕ್ಷಕರು!

'ರೂವಾರಿ' ರೆಂಜಾಳರ ಚಾಣದಿಂದ ಲಕ್ಷೋಪಲ ಏಟು ತಿಂದು ಆಕೃತಿ ಪಡೆದ ಶಿಲಾಕೃತಿಗಳು ಹಲವಾರು! ಆದ

ಅವೆಲ್ಲಕ್ಕಿಂತ ಮಿಗಿಲಾದ ಶಿಲ್ಪಕೃತಿ ಈ ಬಾಹುಬಲಿ! ಅರ್ಧ ಶತ ಮಾನದಷ್ಟು ಕಾಲ ಮಾಡಿದ ತಪಸ್ಸಿನ ಫಲವೊ ಎಂಬಂತೆ ಐದಾರು ವರ್ಷಗಳಿಂದ ಕಡೆಯುತ್ತಾ ಬಂದ ಈ ಕೃತಿಯಿಂದ ಶಿಲ್ಪಿಗೆ ಆಚಂದ್ರಾರ್ಕಕೀರ್ತಿ. ಎಪ್ಪತ್ತೆರಡರ ಹರೆಯದಲ್ಲಿ ಈ ಮಹಾ ಕೃತಿಗೆ ಶ್ರೀ ರೆಂಜಾಳರು ಜನ್ಮದಾತರಾಗಿದ್ದಾರೆ. ಶ್ರೀ ರಾಮನ ಪಾದಸ್ಪರ್ಶದಿಂದ ಕಲ್ಲು ಹೆಣ್ಣಾಗಿ ಎದ್ದು ನಿಂತ ಪುರಾಣ ಕಥೆಗೂ ಮಿಗಿಲೆನ್ನುವಂತೆ ಈ ನವರೂವಾರಿಯ ಕರ ಸ್ಪರ್ಶದಿಂದ ನವ ಶಿಲ್ಪಕೃತಿಯಿಂದ ಎದ್ದು ನಿಂತಿದೆ. ಶ್ರೀ ರೆಂಜಾಳರಿಗೂ ಅವರನ್ನು ಪ್ರೇರಣೆಗೊಳಿಸಿದ ಶ್ರೀ ಹೆಗ್ಗಡೆಯವ ರಿಗೂ ಶಾಶ್ವತ ಕೀರ್ತಿಯನ್ನು ತಂದಿದೆ. ಈ ಜೀವನ ಧನ್ಯ ವೆನ್ನಿಸಿದೆ- ಸಾರ್ಥಕವೆನಿಸಿದೆ!

ಶ್ರೀ ರೆಂಜಾಳರು ಇಂದು ನಿನ್ನೆ ಎದ್ದು ಗೆದ್ದ ಕೀರ್ತಿ ಭಾಜನ ಶಿಲ್ಪಿಯಲ್ಲ, ನಾಲ್ಕೈದು ದಶಕಗಳ ಹಿಂದಿನಿಂದಲೂ ಕಲ್ಲಿನೊಡನೆ ನಂಟು ಬೆಳೆಸಿದವರು. ಕಾರ್ಕಳದ ಶ್ರೀ ವೆಂಕಟ ರಮಣ ದೇವಳದ ಗರುಡ ಮಂಟಪ, ಮುರಲೀಧರ ಮೂರ್ತಿ, ಕಡೆಗೋಲ ಕೃಷ್ಣ, ಸೀತಾರಾಮ ಲಕ್ಷ್ಮಣ ಮುಂತಾದ ಶಿಲ್ಪ ಕೃತಿಗಳೂ ಹಲವಾರು ಮೂರ್ತಿಗಳೂ ಅವರ ಕೈಚಳಕದಿಂದ ರೂಪವಡೆದ ಕೀರ್ತಿಶಾಲಿ ಕೃತಿಗಳು. ಇಷ್ಟಿದ್ದರೂ ಏನೇನೂ ಸದ್ದು ಗದ್ದಲವಿಲ್ಲದ ಶಿಲ್ಪಿ, ಐದು ರೂಪಾಯಿ ವೇತನ ಪಡೆದು ಚಿತ್ರಕಲಾ ಶಿಕ್ಷಕರಾಗಿದ್ದ ಶ್ರೀ ರೆಂಜಾಳ ಗೋಪಾಲ ಶೆಣೈ ರಾಷ್ಟ್ರಮಾನ್ಯ ಶಿಲ್ಪಿಗಳೆಂದು ಮನ್ನಣೆ ಗಳಿಸಿದ್ದಾರೆ. ಈ ಸರಳ ಸ್ವಭಾವದ ವ್ಯಕ್ತಿತ್ವ-ಉನ್ನತ ಸ್ಥಾನಕ್ಕೇರಿದೆ. ಪುರಾತನ ಶಿಲ್ಪಿಗಳ ಕಡೆಗೊಮ್ಮೆ ಸಿಂಹಾವಲೋಕನ ಮಾಡಿದರೆ, ಆ

ಕಾಲಕ್ಕೂ ಈ ಕಾಲಕ್ಕೂ ಬೆಳೆದ ವೈಜ್ಞಾನಿಕ ದೃಷ್ಟಿ, ಧನ-ಜನ ಸಂಪರ್ಕಗಳೊಂದಿಗೆ ಹೋಲಿಸಿದರೆ, ಶ್ರೀ ರೆಂಜಾಳರು ಪುಣ್ಯ ಪುರುಷರೆಂದೇ ಹೇಳಬಹುದು. ಅವರ ಪ್ರೌಢ ಶಿಲ್ಪಕೃತಿಗೆ, ಕಲಾನಿಷ್ಠೆಗೆ ಶಿರಬಾಗಿ 'ತೋಂಗತೋ' ಹಾಡಿ ಚೌಕಿಯನ್ನು ಸೇರಿ ಬಣ್ಣ ತೊಳೆದು ಕುಳಿತರೆ ಸಾಲದು. ಕೃತಜ್ಞತೆಯ ಭಾರ ಎಷ್ಟೆಂದು ಹೇಳಲು ಸಾಧ್ಯವೆ?

ಅಕ್ಟೋಬರ, ೭೪.

ದಿವ್ಯಜೀವನ ಯೋಗಿಗಳು

ಮೂರು ದಶಕಗಳ ಕಾಲ ದಿವ್ಯ ಜೀವಿಗಳ ಸಹವಾಸ ಮಾಡಿಕೊಂಡು ಬಂದ ಶ್ರೀ ಶ್ರೀ ಸಚ್ಚಿದಾನಂದ ಸ್ವಾಮಿಗಳು ನಿರೀಕ್ಷಿತ ಸಂದರ್ಶನ ನೀಡಿದರು - ಮಣಿಪಾಲ, ಉಡುಪಿ. ಂಗಳೂರುಗಳಿಗೆ! ಹೃಷಿಕೇಶದ ಶಿವಾನಂದ ನಗರದಿಂದ ೃದ್ಯಕೀಯ ಸಲಹೆಗಳಿಗಾಗಿ ಬಂದುದೆಂದು ಸಂದರ್ಶನದಲ್ಲಿ ಈ ೀಖಕನಿಗೆ ತಿಳಿಸಿದರು. ಸ್ವಾಮಿ ಶಿವಾನಂದರು ಹಿಮಾಲಯುದ ಪ್ಪಲಲ್ಲಿ ಸ್ಥಾಪಿಸಿದ ದಿವ್ಯ ಜೀವನದ ಯೋಗ ಶಾಲೆಯು ುಖ್ಯಸ್ಥರಾಗಿ, ಆಶ್ರಮ ಕುಲಪತಿಗಳಾಗಿ (ಯೋಗ ವೇದಾಂತ ಾರೆಸ್ಟ್ ಯುನಿವರ್‌ಸಿಟಿಯ ಮೊದಲನೆಯ ಕುಲಪತಿಗಳಾಗಿ) ರಂತರ ಸೇವೆ ಸಲ್ಲಿಸುತ್ತಾ ಬಂದ ದಿವ್ಯ ಜೀವರು!

ಉಡುಪಿಯ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶ ೀರ್ಥ ಶ್ರೀಪಾದರ ಸಂದರ್ಶನಕ್ಕೆಂದು ಬಂದ ಯೋಗಿ ಸಚ್ಚಿದಾ ಂದ ಸ್ವಾಮಿಗಳು ಆಧ್ಯಾತ್ಮಯೋಗ ವಿಚಾರವಾಗಿ ಸಂಭಾಷಣೆ ಡೆಸಿದ ಅಪೂರ್ವ ಸಂದರ್ಭ. ಪರಮಾತ್ಮನನ್ನು ಸಾಕ್ಷಾತ್ಕರಿಸಿ ಂಡವರನ್ನು ತಾವು ಕಂಡಿರುವಿರೆ! ಎಂಬುದು ಪೇಜಾವರ ೀಪಾದರ ಪ್ರಶ್ನೆ. ಕಂಡಿದ್ದವರು ಆ ವಿಚಾರವನ್ನು ಮರೆ ಾಡಿಕೊಳ್ಳುವುದು ಕಾಣದಿದ್ದವರು ಕಂಡಿದ್ದೇವೆಂದು ಡಂಬಾ ರ ಪ್ರದರ್ಶಿಸುವುದೂ ತಮ್ಮ ಅನುಭವ ಎಂದು ಉತ್ತರಿಸು ದೂ ಸ್ವಾಮಿ ಸಚ್ಚಿದಾನಂದರ ವಾಗ್ವೈಖರಿ! ಶ್ರೋತೃಗಳಿ ಂದೆರಡು ಗಂಟೆ ಕಾಲ ಅಧ್ಯಾತ್ಮ ಯೋಗಗಳ ಮಾತಿನ ರಸ ಕ! ನಾರಾಯಣ ಪರಮಹಂಸರು ತೊಡಗಿ, ರಾಮದಾಸರ

ವರೆಗಿನ ಹಲವಾರು ಯತಿಗಳ ಜ್ಞಾನದ ಅಮಿತ ವಿಚಾರ ಸರ
ಧಾರಾಕಾರವಾಗಿ ಹರಿಯಿತು. 'ಜಾತಿನ ಪೂಛೋ ಸಾಧುಕಿ
ಪೂಚ್ ಲೀಜಿಯ ಜ್ಞಾನ್' ಎಂಬ ಕಬೀರ ವಾಣಿಯಂತೆ ಅ
ಎಲ್ಲ ಸಂತರ ಕುರಿತೂ ವಿಚಾರಗಳಾದುವು. 'ಏಕಂ ಸ
ವಿಪ್ರಾಃ ಬಹುಧಾವದಂತಿ' ಎಂಬ ಉಪನಿಷದ್ವಾಕ್ಯ ಪ್ರತಿಬಿ
ಸಿತು. ಅವರವರ ಭಾವಕ್ಕೆ....ಅದರಂತೆ ಇರುತ್ತಿರುವ ಪ
ಮಾತ್ಮನ ಕುರಿತು ನರರೇನು ಭಾವಿಸಿದರೂ ಸರಿಯೆ, ಅ
ಭಕ್ತಿ-ಭಾವಕ್ಕೆ ತಕ್ಕ ಆಕಾರದಲ್ಲಿ ಪರಮಾತ್ಮನು ಒಲಿದುಕೊಳ
ತ್ತಾನೆ. ಒಬ್ಬರ ಮತವನ್ನು ಇನ್ನೊಬ್ಬರು ಖಂಡಿಸಬೇಕಾಗಿ
ಎಲ್ಲವೂ ಪರಮಾತ್ಮನ ಸನ್ನಿಧಿಗೇ ಹೋಗುವ ಮಾರ್ಗ..
ಎಂಬ ನಿಷ್ಕರ್ಷೆಗೆ ಬಂದರು. ಎಲ್ಲ ಕುತೂಹಲಗಳ ತ
ದೈವೀಕ ಪ್ರಜ್ಞೆ. ಆ ಪ್ರಜ್ಞೆಯ ಆಳಕ್ಕೆ ಇಳಿದಾಗ ಆಗ
ಆನಂದವೇ ಅಧ್ಯಾತ್ಮ ಯೋಗ, ಆ ಯೋಗದ ಸಾನ್ನಿಧ್ಯದಲ್ಲಿ
ಪರಮಾತ್ಮನ ನಿಕಟ ವರ್ತಿತ್ವ ಹೀಗೆ ಸಾಗಿದೆ. ಪರಮಾ
ತತ್ವಕ್ಕೆ ಮಾರ್ಗ! ಸುಗಮವಾದ ಮಾರ್ಗ ಯಾವುದು? ಕ
ಮಾರ್ಗದಿಂದ ಲೌಕಿಕದ ಬಂಧನದ ಬಿಡುಗಡೆ, ಭಕ್ತಿ-ಪ್ರೇ
ಗಳಿಂದ, ಧ್ಯಾನಯೋಗದಿಂದ ಪಾರಲೌಕಿಕದ ಮಾರ್ಗದರ್ಶ
ಹೀಗೆ ವಿಚಾರಸಾಗಿದೆ.

ಐವತ್ತೆಂಟರ ಹರೆಯದ- ತೆಳ್ಳಗೆ-ಬೆಳ್ಳಗಿನ ತೇಜೋ
ಯಂತೆ ಹೊಳೆವ ಸ್ವಾಮಿಗಳು ಶ್ರೀ ಪೇಜಾವರ ಮ
ಧೀಶರ ಪಾದ ಮುಟ್ಟಿ ನಮಸ್ಕರಿಸಿದಾಗ ಅವರ ಧಾವಿ
ಪ್ರಜ್ಞೆಯ ಆಳ ಅರ್ಥಮಾಡಿಕೊಳ್ಳಲಿಕ್ಕೆ ಕಷ್ಟವಾಯಿ
೧೯೧೭ರಲ್ಲಿ ಮಂಗಳೂರಿನ ಕುಲೀನ ಮನೆತನದಲ್ಲಿ ನೆಲ್ಲಿಕ
ಕುಟುಂಬದಲ್ಲಿ ಜನ್ಮವೆತ್ತಿದ ಶ್ರೀಧರರಾಯರು ಬಾಲ್ಯ ವಿ

್ಯಾಸವನ್ನು ಮುಗಿಸಿ ಮದರಾಸಿನಲ್ಲಿ ಪದವೀ ಪರೀಕ್ಷೆಯನ್ನೂ ುಗಿಸಿಕೊಂಡು ತಮ್ಮಲ್ಲಿದ್ದ ಅಧ್ಯಾತ್ಮ ಕೃಪೆಯಿಂದ ಉತ್ತರ ್ರದೇಶದ ಹಿಮಾಲಯದ ತಪ್ಪಲಿನ ಹೃಷಿಕೇಶದ ದಿವ್ಯ ಜೀವ ದ ಯೋಗಾಶ್ರಮದ ಆಶ್ರಯವನ್ನು ಪಡೆದರು. ಸ್ವಾಮಿ ಾನಂದರ ಕೃಪೆಗೆ ಪಾತ್ರರಾದರು, ಅವರು ಸ್ಥಾಪಿಸಿದ ೋಗ ವೇದಾಂತ ಸಾಧಕರಿಗೆಲ್ಲ ಮುಖ್ಯಸ್ಥರಾದರು. ೧೯೬೩ ್ಲಿ ಸನ್ಯಾಸ ದೀಕ್ಷೆಯನ್ನು ತಳೆದರು. ಮೂರು ವರ್ಷಗಳ ಲ ವಿದೇಶಗಳಲ್ಲಿ ಸಂಚರಿಸಿ ಅಲ್ಲಿನ ಯೋಗಿಗಳನ್ನೆಲ್ಲ ಕಂಡ ಿಸಿ ಹಿಂದಿರುಗಿದರು. ೧೯೬೩.ರಲ್ಲಿ ಶಿವಾನಂದರು ನಿರ್ಯಾಣ ಂಡಾಗ, ಶಿವಾನಂದ ನಗರದ ಮುಖ್ಯಸ್ಥರಾಗಿಯೇ ನೇಮಕ ೊಂಡರು. ೧೯೪೩.ರಲ್ಲಿ ಶಿವಾನಂದ ಸ್ವಾಮಿಗಳ ಯೋಗಾ ಮಕ್ಕೆ ಸೇರಿದ ಮೇಲೆ ಹಲವಾರು ಅಧ್ಯಾತ್ಮ ವಿಚಾರ ಸಭೆ ಲ್ಲೆಲ್ಲ ಭಾಗವಹಿಸಿದ್ದರು. ತಮ್ಮ ಮೂಲ ನೆಲ್ಲಿಕಾಯಿ ನೆತನ ಎಂಬ ಅಭಿಮಾನ ಶ್ರೀ ಸ್ವಾಮಿಗಳಲ್ಲಿ ಉಳಿದಿಲ್ಲ. ರೆ ತಾವು ಈ ಜಗತ್ತಿನ ಸೇವಕನಾಗಿ ಬಾಳಬೇಕಾದವರೆಂಬ ಜ್ಞೆ ಅವರದು!

ಮೇ, ೧೯೭೪

ಶ್ರೀರಾಮಾರ್ಪಣ